ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 41 ಅಕ್ಟೋಬರ್ 12, 1986 ಬೆಲೆ 80 ಪೈಸೆ

ಒಳಗೇನಿದೆ?....

ವೀರಾಜಪೇಟೆಯಲ್ಲಿ ಪುಂಡರ ಗೂಂಡಾಗಿರಿ ಪೋಲೀಸರ ನಿಷ್ಕ್ರಿಯತೆ

ದೇಶದ ಭದ್ರತೆಗೆ, ಐಕ್ಯತೆಗೆ ಗಂಡಾಂತರ ಕಾರಿಯಾದ ಮತೀಯ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಿ, ರಾಷ್ಟ್ರದ ಸಾರ್ವಭೌಮತ್ವವನ್ನು, ಭಾವೈಕ್ಯತೆಯನ್ನು ಕಾಪಾಡಿಕೊಂಡು ಹೋಗಬೇಕೆಂದು ಎಲ್ಲಾ ಪಕ್ಷಗಳೂ ಕರೆ ಕೊಡುತ್ತಾ ಬಂದಿವೆ. ಕೇಂದ್ರ ಸರಕಾರ ಕೂಡಾ ರಾಷ್ಟ್ರೀಯ ಭಾವೈಕ್ಯತಾ ಸಮಿತಿಯನ್ನು ಪುನರ್ರಚಿಸಿ ಎರಡು ಸಭೆಗಳನ್ನು ಕರೆದು ದೇಶದ ಸಮಗ್ರತೆಯನ್ನು ಕಾಪಾಡಲು ಕರೆ ನೀಡಿದೆ. ಅಂಥ ಸಭೆಗಳಲ್ಲಿ ಪಾಲ್ಗೊಂಡಿದ್ದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್ ನಂಬೂದರಿಪಾದ್ ಅವರು ಕಾಂಗ್ರೆಸ್ ಮತ್ತು ಇತರ ಬಂಡವಾಳಶಾಹಿ ವಿರೋಧ ಪಕ್ಷಗಳೇ ದೇಶದಲ್ಲಿಯ ಛಿದ್ರಕಾರಿ ಮತೀಯ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಿವೆಂದು ಆರೋಪಿಸಿದ್ದರು. ಕಾಂಗ್ರೆಸ್ ಪಕ್ಷ ತೋರಿಕೆಗಾಗಿ ಭಾವೈಕ್ಯತೆ, ಜಾತಿಯ ಸೌಹಾರ್ದತೆ ಕುರಿತು ದೀರ್ಘ ಭಾಷಣಗಳನ್ನು ಬಿಗಿಯುತ್ತಿದ್ದರೂ, ತನ್ನ ಪಕ್ಷದ ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಮತೀಯ ಶಕ್ತಿಗಳನ್ನೇ ಅವಲಂಬಿಸಿದೆಂಬುದು ಸರ್ವವಿದಿತ. ಕರ್ನಾಟಕದಲ್ಲಿ ಜನತಾ ಪಕ್ಷವೂ ಕೂಡ ಕಾಂಗ್ರೆಸ್ ಪಥವನ್ನೇ ಅನುಸರಿಸುತ್ತಿರುವಂತೆ ಕಂಡು ಬರುತ್ತಿದೆ. ಕೊಡಗು ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಇತ್ತೀಚೆಗೆ ವಿರಾಜಪೇಟೆಯ ಘಟನೆ ಅದಕ್ಕೆ ಸಾಕ್ಷಿಯಾಗಿದೆ.

ಕಳೆದ ಕೆಲವು ವರ್ಷಗಳಿಂದ ಕೊಡಗಿನಲ್ಲಿ ಮಣ್ಣಿನ ಮಕ್ಕಳ ವಾದ ಮುಂದೆ ಮಾಡಿ ಮುಖ್ಯವಾಗಿ ಕೇರಳೀಯರ ವಿರುದ್ಧ ಪ್ರಬಲ ಪ್ರಚಾರ, ದಾಳಿ ನಡೆದಿರುವ ಸಂಗತಿ ಎಲ್ಲರಿಗೂ ಗೊತ್ತು. ಕಾಂಗ್ರೆಸ್ ಸರಕಾರ ಇದ್ದಾಗಲೂ ಅದು ನಡೆದಿತ್ತು. ಜನತಾ ಸರಕಾರದಲ್ಲೂ ಅದು ಮುಂದುವರೆದಿದೆ. ಈಗ ಪರಪ್ರಾಂತೀಯರ ವಿರುದ್ಧ ಮಾತ್ರವಲ್ಲ, ಅಲ್ಪ ಮತೀಯರ ಮೇಲೆ ದಬ್ಬಾಳಿಕೆ ನಡೆದಿದೆ ಪೋಲೀಸರ ದಾಖಲೆಯಲ್ಲಿರುವ ಗೂಂಡಾ ಜನರು ಗೂಂಡಾಗಿರಿ ಮಾಡುತ್ತಾರೆ. ಪೋಲೀಸರು ಅಂಥವರ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ. ಕಾಂಗ್ರೆಸ್ – ಜನತಾ ಪಕ್ಷದವರೂ ಅಂಥವರಿಗೆ ಬೆಂಬಲ ನೀಡುತ್ತಿದ್ದಾರೆ. ಕೆಲವು ಪೋಲೀಸ್ ಅಧಿಕಾರಿಗಳು ಅಂಥ ಸಮಾಜ ದ್ರೋಹಿಗಳ ಮೇಲೆ ಕ್ರಮ ಕೈಗೊಂಡರೆ, ಜನತಾ ಸರಕಾರ ಅಂಥ ಪೋಲೀಸ್ ಅಧಿಕಾರಿಗಳನ್ನೇ ಮತ್ತೊಂದು ಊರಿಗೆ ಬದ್ಲಿ ಮಾಡುತ್ತದೆ. ಈ ರೀತಿ ಮತೀಯ ಶಕ್ತಿಗಳಿಗೂ ಗೂಂಡಾ ಜನರಿಗೂ ಬಂಡವಾಳಶಾಹಿ ಪಕ್ಷಗಳೂ ಪೋಲೀಸರೂ ಬೆಂಬಲ ನೀಡಿ ಜಾತೀಯ ಗಲಭೆಗೆ–ಅಲ್ಪ ಭಾಷಿತರ ಮೇಲೆ ಅತ್ಯಾಚಾರ ನಡೆಸಲು ಅವಕಾಶ ಮಾಡಿ ಕೊಡುತ್ತಿದ್ದಾರೆ.

17-8-86 ರಂದು ವಿರಾಜಪೇಟೆಯಲ್ಲಿ ಬಕ್ರಿದ್ ಹಬ್ಬದ ದಿವಸ ಮೆರವಣಿಗೆ ನಡೆಯುತ್ತಿದ್ದಾಗ ಪೋಲೀಸರ ಬೇಜವಾಬ್ದಾರಿಯಿಂದ ಒಂದು ಖಾಸಗಿ ಬಸ್ಸು ಒಳ ನುಗ್ಗಿದ ಕಾರಣ ಕಲ್ಲು ತೂರಾಟದಿಂದಾಗಿ ಬಸ್ಸಿಗೆ ಜಖಂ ಆಯಿತು. ಇದನ್ನೇ ದೊಡ್ಡದು ಮಾಡಿ ಜನಜಾಗೃತಿ ಸಮಿತಿಯ ವಕ್ತಾರರೆಂದು ಕೊಳ್ಳುವ ಕೆಲವರು ಬಸ್ ಸಂಚಾರವನ್ನು ಬಲತ್ಕಾರವಾಗಿ ನಿಲ್ಲಿಸಿದರು. ಅನಂತರ ಇತರ ವಾಹನ ಸಂಚಾರಗಳನ್ನು ತಡೆಹಿಡಿಯಲಾಯಿತು. ಅಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ಮತ್ತು ದೃಢವಾಗಿ ವರ್ತಿಸಲು ವಿಫಲರಾದುದರಿಂದ ಈ ವ್ಯಕ್ತಿಗಳು ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಳ್ಳಲು ಸಾಧ್ಯವಾಯಿತು.

ಅಲ್ಪ ಮತಸ್ಥರು ಪ್ರತಿನಿಧಿಗಳು ಬಸ್ಸಿಗಾದ ನಷ್ಟ ತುಂಬಿ, ಕ್ಷೇಮ

(8 ನೇ ಪುಟ ನೋಡಿ)

ವೀಸಲಾತಿ ಕುರಿತು ಸರ್ಕಾರದ ನಿರ್ಣಯ

ವೆಂಕಟಸ್ವಾಮಿ ಆಯೋಗದ ಶಿಫಾರಸುಗಳ ಕುರಿತು ಎದ್ದಿರುವ ಗೊಂದಲಕ್ಕೆ ರಾಮಕೃಷ್ಣ ಹೆಗಡೆ ಸರಕಾರ ಬಹು ಬುದ್ಧಿವಂತಿಕೆಯ ತೆರೆ ಎಳೆದಿದೆ. ಮುಂಬರುವ ಜಿಲ್ಲಾ ಪರಿಷತ್ – ಮಂಡಲ ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡೇ "ಎಲ್ಲರಿಗೂ ಸಮಾಧಾನಕರವಾಗುವ" ನಿರ್ಣಯ ನೀಡಬೇಕೆಂಬ ಅಂಶ ಎದ್ದು ಕಾಣುತ್ತದೆ.

ಮೀಸಲಾತಿಗೊಳಪಡುವವರನ್ನು ನಿರ್ಧರಿಸುವಾಗ ಜಾತಿಯ ಜೊತೆಯಲ್ಲಿ ಉತ್ಪನ್ನವನ್ನೂ ಗಣನೆಗೆ ತೆಗೆದುಕೊಳ್ಳಬೇಕೆಂದು ಸಿ. ಪಿ. ಐ. (ಎಂ) ಪಕ್ಷ ಅಭಿಪ್ರಾಯಪಟ್ಟಿತ್ತು. ಈಗಿನ ನಿರ್ಣಯ ಆ ಅಂಶವನ್ನು ಒಪ್ಪಿಕೊಂಡಂತಾಗಿದೆ. ವೆಂಕಟಸ್ವಾಮಿ ಆಯೋಗ ರದ್ದು ಮಾಡಿರುವ ಹಿಂದುಳಿದ ವಿಶಿಷ್ಟ ಗುಂಪನ್ನು ಉಳಿಸಿಕೊಳ್ಳಬೇಕೆಂದೂ ಸಿ.ಪಿ.ಐ. (ಎಂ) ಪಕ್ಷ ಕೇಳಿತ್ತು. ಆದರ ಮೀಸಲಾತಿಯನ್ನು 15 ರಿಂದ 5ಕ್ಕೆ ಇಳಿಸಿದ್ದರೂ ಕೂಡ ಅದನ್ನು ಉಳಿಸಿರುವುದು ಸ್ವಾಗತಾರ್ಹ. ಮೀಸಲಾತಿ ಸೌಲಭ್ಯ ಪಡೆಯಲು ರೂ. ಹತ್ತು ಸಾವಿರ ಮಿತಿ ಇಡಲಾಗಿದೆ. ಉತ್ಪನ್ನ ಸರ್ಟಿಫಿಕೇಟ್ ಪಡೆಯುವಲ್ಲಿ ಭ್ರಷ್ಟಾಚಾರ ಮಿತಿಮೀರಿ, ಅರ್ಹರಿಗೆ ಮೀಸಲಾತಿಯ ಲಾಭ ಸಿಗದಂತಾಗಿದೆ. ಉತ್ಪನ್ನ ಕಂಡು ಹಿಡಿಯುವುದಕ್ಕೆ, ಉತ್ಪನ್ನ ಸರ್ಟಿಫಿಕೇಟು ನೀಡುವುದಕ್ಕೆ ಬಿಗಿ ಕ್ರಮ ಅಗತ್ಯ. ಸುಳ್ಳು ಸರ್ಟಿಫಿಕೇಟು ಪಡೆಯುವವರ ಮೇಲೆ ಉಗ್ರ ಕ್ರಮ ಕೈಗೊಳ್ಳುವಂತಾಗಬೇಕೆಂದು ಸಿ ಪಿಐ. (ಎಂ) ಪಕ್ಷದ ಅಭಿಪ್ರಾಯ.

ಜನತಾ ಸರಕಾರ ಯಾವ ಉದ್ದೇಶದಿಂದಾಗಿ ಮೀಸಲಾತಿ ನಿರ್ಣಯವನ್ನು ಕೈಗೊಂಡಿರಲಿ, ಇದರಲ್ಲಿರುವ ಮುಖ್ಯ ಪ್ರಶ್ನೆ ಯಾವುದೆಂದರೆ ನಿಜವಾಗಿಯೂ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುವುದು ಹೆಗಡೆ ಸರಕಾರದ ಆದ್ಯ ಕರ್ತವ್ಯವೆಂಬುದನ್ನು ನೆನಪಿಸಿಕೊಡಲು ಇಚ್ಛಿಸುತ್ತೇವೆ.

ತುಮಕೂರು :

ಬಡ ರೈತರ ಮೇಲೆ ಗೂಂಡಾ ಧಾಳಿ

ಸಿರಾ ತಾಲ್ಲೂಕಿನ ತುಪ್ಪದಕೋಣ ಗ್ರಾಮದಲ್ಲಿ ಅಕ್ಟೋಬರ್ 1 ರಂದು ಸ್ಥಳೀಯ ಭೂಮಾಲಿಕರು ಬಾಡಿಗೆ ಗೂಂಡಾಗಳಿಂದ ಅಲ್ಲಿನ ಬಡರೈತರ ಮೇಲೆ ಹಲ್ಲೆ ನಡೆಸಿ 11 ಗುಡಿಸಲುಗಳನ್ನು ಸುಟ್ಟುಹಾಕಿ, ಬಡರೈತರು ಬೆಳೆಸಿದ್ದ ಎರಡು ಸಾವಿರ ತೆಂಗಿನ ಸಸಿಗಳನ್ನು ನಾಶಮಾಡಿದ್ದಾರೆಂದು ಕರ್ನಾಟಕ ಪ್ರಾಂತ ರೈತ ಸಂಘದ ತುಮಕೂರು ಜಿಲ್ಲಾ ಸಮಿತಿ ಜಿಲ್ಲೆಯ ಪೋಲೀಸ್ ಮುಖ್ಯಾಧಿಕಾರಿಗಳಿಗೆ ದೂರು ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಹೇಳ್ಯಂಡ ಗ್ರಾಮದ 40 ಭೂಹೀನ ರೈತರು 10–15 ವರ್ಷಗಳಿಂದಲೂ ರೆವಿನ್ಯೂ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇವರಲ್ಲಿ ಬಹುತೇಕ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು. ಐದು ತಿಂಗಳ ಹಿಂದೆ ಪ್ರಾಂತ ರೈತ ಸಂಘದ ಘಟಕವು ಈ ಗ್ರಾಮದಲ್ಲಿ ಪ್ರಾರಂಭಗೊಂಡು ಈ ಬಡ ರೈತರ ಜಮೀನು ಸಾಗುವಳಿಯನ್ನು ಅಧಿಕೃತಗೊಳಿಸಿ ಸಾಗುವಳಿ ಚೀಟಿ ನೀಡಬೇಕೆಂದು ಸರಕಾರವನ್ನು ಮತ್ತು ತಹಸೀಲ್ದಾರರನ್ನು ಒತ್ತಾಯಿಸಿತ್ತು. ಸಿರಾ ತಾಲೂಕಿನ ತಹಸೀಲ್ದಾರರು ಮನವಿಯನ್ನು ಅಂಗೀಕರಿಸಿ ಅನಧಿಕೃತ ಸಾಗುವಳಿದಾರರನ್ನು ಭೇಟಿ ಮಾಡಿ, ಸಾಗುವಳಿಯನ್ನು ಅಧಿಕೃತಗೊಳಿಸುವ ದಾಖಲೆಯನ್ನು ತಯಾರು ಮಾಡಿರುವುದಾಗಿಯೂ, ಪೋಲೀಸ್ ರಕ್ಷಣೆಯನ್ನು ಒದಗಿಸುವುದಾಗಿಯೂ, ತಿಳಿಸಿದ್ದರು. ಆದರೆ ಅಕ್ಟೋಬರ್ 1 ರಂದು ಸ್ಥಳೀಯ ಭೂಮಾಲಿಕರು ಗೂಂಡಾಗಳಿಂದ ಹಲ್ಲೆ ನಡೆಸಿ ಬಡ ರೈತರನ್ನು ಒಕ್ಕಲೆಬ್ಬಿಸಿ ಆ ಜಮೀನುಗಳನ್ನು ತಾವೇ ಲಪಟಾಯಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ಕೂಡಲೇ ತನಿಖೆ ನಡೆಸಿ ಬಡ ರೈತರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಪ್ರಾಂತ ರೈತ ಸಂಘವು ಪೋಲೀಸ್ ಮುಖ್ಯಸ್ಥರಿಗೆ ಮನವಿ ಸಲ್ಲಿಸಿದೆ.

ಕೃಷಿಕರ ಮೇಲೆ ಹಲ್ಲೆ

ಹೊಸಪೇಟೆ ತಾಲ್ಲೂಕಿನ ಗಾದಿಗನೂರು, ರಾಕಬೀಳು ಹಾಗೂ ಪಾಪಿನಾಯಕನಹಳ್ಳಿ ಗ್ರಾಮಗಳ ಬಡ ಕೃಷಿ ಕೂಲಿಗಾರರು ಅಲ್ಲಿನ ಗುಡ್ಡಗಳಿಂದ ಕಟ್ಟಿಗೆಗಳನ್ನು ಆಯ್ದು ತಂದು ಮಾರಾಟ ಮಾಡಿ ಜೀವಿಸುತ್ತಿದ್ದಾರೆ. ಮಳೆಯಿಲ್ಲದೆ ಕಂಗಾಲದ ಜನರು ಜೀವನೋಪಾಯಕ್ಕಾಗಿ ನಡೆಸುತ್ತಿರುವ ಈ ಕೆಲಸಕ್ಕೂ ಕೂಡ ಅರಣ್ಯ ಇಲಾಖೆಯ ಸಿಬ್ಬಂದಿಗಳು ಅಡ್ಡಿ ಮಾಡಿ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಆಗಸ್ಟ್ 28 ರಂದು ಈ ಬಡ ಕೃಷಿ ಕೂಲಿಗಾರರನ್ನು ಹಿಡಿದು ಅವರ ಮೇಲೆ ಹಲ್ಲೆ ನಡೆಸಲಾಗಿದೆ. ಗಾದಿನೂರಿನ ಲಕ್ಷ್ಮಿ ಮತ್ತು ಪಾಪಿನಾಯಕನ ಹಳ್ಳಿಯ ಕುಪ್ಪಮ್ಮ ಎಂಬ ಇಬ್ಬರು ಹೆಂಗಸರನ್ನು ಚೆನ್ನಾಗಿ ಥಳಿಸಿ ಇವರನ್ನು ಮಲಗಿಸಿ ತೊಡೆಗಳ ಮೇಲೆ ಬೂಟು ಗಾಲುಗಳಿಂದ ತುಳಿದು ಅಂಗಾಲುಗಳಿಗೆ ಬಡಿಗೆಗಳಿಂದ ಹೊಡೆದಿದ್ದಾರೆ ಇಷ್ಟೇ ಅಲ್ಲದೆ 6 ಜನರ ಮೇಲೆ ಗಂಧದ ಕಟ್ಟಿಗೆಗಳನ್ನು ಸಾಗಿಸಿದರೆಂಬ ಸುಳ್ಳು ಆರೋಪ ಹೊರಿಸಿ ಹೊಸಪೇಟೆ ಸಬ್ ಜೈಲಿಗೆ ನೂಕಿದ್ದಾರೆ. ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ॥ ಪಿ. ಆರ್. ವೆಂಕಟೇಶ್ ಮತ್ತು ಸದಸ್ಯರಾದ ಕಾ॥ ತಿಮ್ಮಣ್ಣ ಅವರು ಪ್ರತಿ ಗ್ರಾಮಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರಲ್ಲದೆ ಹೊಸಪೇಟೆಯ ಸಬ್ ಜೈಲ್‌ಗೆ ಭೇಟಿ ನೀಡಿ ನಿರಪರಾಧಿ ಕೂಲಿಕಾರರನ್ನು ಭೇಟಿಯಾದರೆಂದು ವರದಿಯಾಗಿದೆ.

ಸೆಪ್ಟಂಬರ್ 5 ರಂದು 500 ಕೃಷಿ ಕೂಲಿಗಾರ ಬೃಹತ್ ಮೆರವಣಿಗೆ ಹೊಸಪೇಟೆಯ ಪ್ರಮುಖ ಬೀದಿಗಳಲ್ಲಿ ನಡೆದು ಅಸಿಸೆಂಟ್ ಕಮೀಷನರ್ ಕಚೇರಿಯೆದುರು ಬಹಿರಂಗ ಸಭೆ ನಡೆಸಲಾಯಿತೆಂದು ತಿಳಿದು ಬಂದಿದೆ

ರೈತ ಸಂಘದಿಂದ ರಸ್ತೆತಡೆ

ಬಳ್ಳಾರಿ ಜಿಲ್ಲೆಯ ದಮ್ಮೂರಕಗ್ಗಲ್ ಪ್ರದೇಶದ ಭೂಮಿಗಳಿಗೆ ಸಮರ್ಪಕವಾದ ನೀರಿನ ಸರಬರಾಜು ಮತ್ತು ಅದರ ವಿತರಣೆಗೆ ಒತ್ತಾಯಿಸಿ ಸುಮಾರು 700ಕ್ಕೂ ಅಧಿಕ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕೋಳೂರು ಕ್ರಾಸ್‌ಬಳಿ ಸೆಪ್ಟಂಬರ್ 8ರಂದು ರಸ್ತೆತಡೆ ಚಳವಳಿ ನಡೆಸಿರುವುದಾಗಿ ವರದಿಯಾಗಿದೆ.

ದಮ್ಮೂರಕಗ್ಗಲ್ ಪ್ರದೇಶವು ತುಂಗಭದ್ರಾ ನದಿಯ ಎಡದಂಡೆ ಕಾಲುವೆಯ ಕೊನೆಯ ಭಾಗವಾಗಿದ್ದು ಈ ಭಾಗದ ರೈತರಿಗೆ ತೀರಾ ಕಡಿಮೆ ನೀರು ದೊರೆಯುತ್ತಿದೆ ಹೀಗಾಗಿ ಹೆಚ್ಚುವರಿ ನೀರು ಮತ್ತು ಪಿಕಅಪ್ ಯೋಜನೆ ಒತ್ತಾಯಿಸಲಾಗುತ್ತಿತ್ತು, ನೀರು ಸರಿಯಾಗಿ ಸರಬರಾಜಾಗದೆ ಪೈರುಗಳು ಒಣಗುವ ಪರಿಸ್ಥಿತಿಯೊದಗಿದೆ.

ಚಳವಳಿಕಾರರನ್ನು ಭೇಟಿಯಾದ ವಿಶೇಷ ಜಿಲ್ಲಾಧಿಕಾರಿಗಳು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಎಂಟು ದಿನಗಳೊಳಗಾಗಿ ನೀರಿನ ಸರಬರಾಜನ್ನು ಸಮರ್ಪಕಗೊಳಿಸಲಾವುದೆಂಬ ಭರವಸೆ ನೀಡಿದ ನಂತರವೇ ರಸ್ತೆ ತಡೆಯನ್ನು ನಿಲ್ಲಿಸಲಾಯಿತೆಂದು ವರದಿ ತಿಳಿಸಿದೆ.

ಸಚಿವರಿಗೆ ಮನವಿ

ದಿನಾಂಕ 13–91–98 ರಂದು ಸಾಯಂಕಾಲ 7 ಗಂಟೆಗೆ ಸಿಂಧನೂರಿಗೆ ಆಗಮಿಸಿದ ಲೋಕೋಪಯೋಗಿ ಸಚಿವರಾದ ಶ್ರೀ ಹೆಚ್. ಡಿ. ದೇವೇಗೌಡ ಇವರಿಗೆ ಕಾರ್ಮಿಕರ ಬೇಡಿಕೆಗಳ ಹಾಗೂ ಸಾರ್ವಜನಿಕರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಸಿ. ಐ. ಟಿ. ಯು. ನಗರ ಸಮಿತಿ ನೇತೃತ್ವದಲ್ಲಿ ರಿಕ್ಷಾ ಕಾರ್ಮಿಕರು, ಹಮಾಲಿ ಕಾರ್ಮಿಕರು, ಬಂಡಿ ಹೊರಲು ಇವರು ಸಲ್ಲಿಸಿದರು.

ಮನವಿ ಪತ್ರದ ವಿವರಗಳನ್ನು ವೇದಿಕೆ ಮೇಲೆ ಹೇಳದೇ ಇದ್ದದ್ದಕ್ಕಾಗಿ ಕಾರ್ಮಿಕರು ನಿರಾಶೆಗೊಂಡು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಘೋಷಣೆಗಳನ್ನು ಕೂಗಿದರು ಮತ್ತು ಬೇಡಿಕೆಗಳನ್ನು ಈಡೇರಿಸುವಂತೆ ಸಚಿವರನ್ನು ಒತ್ತಾಯಿಸಿದರು.

ಕಛೇರಿ ಉದ್ಘಾಟನೆ

ಕಾಪು ಪ್ರದೇಶ ಬೀಡಿ ಕೆಲಸಗಾರರ ಸಂಘದ ನೂತನ ಕಚೇರಿಯನ್ನು ಕಾ. ಪಿ. ರಾಮಚಂದ್ರರಾವ್, ಅವರು ಸೆಪ್ಟಂಬರ್ 22 ರಂದು ಉದ್ಘಾಟಿಸಿದರು. ಕಾ. ಉಮಾನಾಥ್ ಅವರು ಸ್ವಾಗತಿಸಿ ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಬೀಡಿ ಕಾರ್ಮಿಕರು ಮಾತ್ರವಲ್ಲದೆ ಇನ್ನಿತರ ಕಾರ್ಮಿಕರ ಸಂಘಟನೆಗಳಿಗೂ ನೂತನ ಕಚೇರಿ ಚಟುವಟಿಕೆಯ ಕೇಂದ್ರವಾಗಬೇಕೆಂದು ಕಾ. ಪಿ. ರಾಮಚಂದ್ರರಾವ್ ಕಿಕ್ಕಿರಿದು ನೆರೆದ ಸಂಘದ ಕಾರ್ಯಕರ್ತರನ್ನುದ್ದೇಶಿಸಿ ನುಡಿದರು.

ದ. ಕನ್ನಡ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್‌ನ ಕಾರ್ಯದರ್ಶಿ ಕಾ. ಯು. ಬಿ. ಲೋಕಯ್ಯ ಅವರು ಮಾತನಾಡಿ ಬೀಡಿ ಕಾರ್ಮಿಕರ ಸಂಘಟನೆಯನ್ನು ಬಲಪಡಿಸಲು ಶ್ರಮಿಸಬೇಕೆಂದು ಕರೆ ನೀಡಿದರು.

ಡಿ. ವೈ. ಎಫ್. ಐ. ಚಟುವಟಿಕೆಗಳು

ಬಳ್ಳಾರಿ

ಬಳ್ಳಾರಿಯ ಮಹಾನಂದಿ ಕೊಟ್ಟಂ ಪ್ರದೇಶದ ಡಿ.ವೈ.ಎಫ್.ಐ. ಸರ್ವ ಸದಸ್ಯರ ಸಭೆಯು ಆಗಸ್ಟ್ 30 ರಂದು ನಡೆಯಿತು. ಕಾರ್ಯದರ್ಶಿ ಕಾ॥ ಸಿ. ಕೆಂಚಪ್ಪ ಅವರು ಚಟುವಟಿಕೆಗಳ ವರದಿಯನ್ನು ಸಭೆಯಲ್ಲಿಮಂಡಿಸಿದರು. ಕಾ॥ ಎಸ್. ಪ್ರಸನ್ನ ಕುಮಾರ್ ಅವರು ಕಳೆದ ವರ್ಷದಿಂದೀಚೆಗೆ ಇಲ್ಲಿನ ಜನತೆಯು ನಡೆಸಿದ ಹೋರಾಟಗಳು, ರೈತ—ವಿದ್ಯಾರ್ಥಿ—ಯುವಜನರ ಹಾಗೂ ಇತರ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಸೌಹಾರ್ದ ಬೆಂಬಲ ನೀಡಿದ್ದನ್ನು ನೆನಪಿಸಿದರು.

ನಂತರ ನೂತನ ಸಮಿತಿಯನ್ನು ಆಯ್ಕೆಮಾಡಲಾಯಿತು ಅಧ್ಯಕ್ಷರಾಗಿ ಕಾ. ರಾಮಕೃಷ್ಣ, ಕಾರ್ಯದರ್ಶಿಯಾಗಿ ಕಾ. ಕೆ. ಚಂಪ್ಪ, ಉಪಾಧ್ಯಕ್ಷರಾಗಿ ಕಾ. ಲಕ್ಷ್ಮಮ್ಮ ಸಹಕಾರ್ಯದರ್ಶಿಗಳಾಗಿ ಕಾ. ಗಂಗಮ್ಮ ಕಾ. ಹಂಪಮ್ಮ, ಕಾ. ಎಸ್. ಎ ರಂಗಾ ಅವರುಗಳು ಆಯ್ಕೆಯಾಗಿದ್ದಾರೆ.

ಎಸ್.ಎಫ್.ಐ. ನ ಜಿಲ್ಲಾ ಕಾರ್ಯದರ್ಶಿ ಕಾ. ಗುರುಶಾಂತ್ ಅವರು ನೂತನ ಸಮಿತಿಗೆ ಶುಭಕೋರಿ ಮಾತನಾಡಿದರು.

ಕುಷ್ಟಗಿ

ಸೆಪ್ಟಂಬರ್ 23 ರಂದು ಕುಷ್ಟಗಿಯಲ್ಲಿ ನಡೆದ ಡಿ.ವೈ.ಎಫ್.ಐ. ಕಾರ್ಯಕರ್ತರ ಸಭೆಯಲ್ಲಿ ಘಟಕವೊಂದನ್ನು ರಚಿಸಲಾಯಿತು.

ಕಾ. ಗಂಗಾಧರ ಕುಷ್ಟಗಿ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಜಾತಿ, ಧರ್ಮಗಳ ಆಧಾರದಲ್ಲಿ ಯುವಜನರನ್ನು ಸಂಘಟಿಸುವ ಅಪಾಯದ ಬಗ್ಗೆ, ತಿಳಿವಳಿಕೆ ನೀಡಿದರು.

ಸಭೆಯಲ್ಲಿ 13 ಜನರ ತಾತ್ಕಾಲಿಕ ಸಮಿತಿಯನ್ನು ರಚಿಸಲಾಗಿದ್ದು ಕಾ. ಅಡಿವೆಪ್ಪ, ಕಾ. ಶಶಿಕಾಂತ, ಕಾ. ವೈ. ಜಗನಾಥ್ ಅವರುಗಳನ್ನು ಸಂಚಾಲಕರನ್ನಾಗಿ ಆರಿಸಲಾಗಿದೆ.

ಶಿರಗುಪ್ಪ

ಶಿರಗುಪ್ಪದ ಡಿ. ವೈ. ಎಫ್. ಐ. ಶಾಖೆ ತನ್ನ ಕಾರ್ಯಕರ್ತರಿಗಾಗಿ ಆಗಸ್ಟ 27 ರಂದು ತರಗತಿಗಳನ್ನು ನಡೆಸಿತು. 'ಯುವಜನತೆ ಮತ್ತು ರಾಜಕೀಯ' 'ಸಂಘಟನೆಯ ಧ್ಯೇಯೋದ್ದೇಶಗಳು' ಎಂಬ ಬಗ್ಗೆ ಕಾ. ಎಸ್. ಪ್ರಸನ್ನ ಕುಮಾರ್ ಉಪನ್ಯಾಸ ನೀಡಿದರು.

'ಕೊಳಚೆ ಪ್ರದೇಶದ ಹೋರಾಟದ ಅನುಭವಗಳ' ಬಗ್ಗೆ ಜಿಲ್ಲಾ ಸಮಿತಿ ಖಜಾಂಚಿ ಕಾ. ಸಿ. ಕೆಂಚಪ್ಪ ಮಾತನಾಡಿದರು. ಅಧ್ಯಕ್ಷತೆಯನ್ನು ಕಾ. ಎಲ್ಲಪ್ಪ ವಹಿಸಿದ್ದು, ಕಾ. ಬಸವರಾಜ್ ಸ್ವಾಗತಿಸಿದರು.

ತೋರಣಗಲ್

ಡಿ.ವೈ.ಎಫ್.ಐ. ಸರ್ವ ಸದಸ್ಯರ ಸಭೆ ತೋರಣಗಲ್‌ನಲ್ಲಿ ಆಗಸ್ಟ್ 29 ರಂದು ನಡೆದು 20 ಸದಸ್ಯರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕಾ. ಹೊನ್ನೂರಪ್ಪ, ಕಾರ್ಯದರ್ಶಿಯಾಗಿ ಕಾ. ಚನ್ನಬಸಪ್ಪ, ಆಯ್ಕೆಯಾದರು. ಆರಂಭದಲ್ಲಿ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯಾಗಿದ್ದ ಕಾ. ಚನ್ನಬಸಯ್ಯ ಮಂಡಿಸಿದರು. ಸಂಘಟನೆಯ ಉದ್ದೇಶ, ಸಮಿತಿಗಳ ರಚನೆಯ ಮಹತ್ವದ ಬಗ್ಗೆ ಡಿ. ವೈ. ಎಫ್. ಐ. ಜಿಲ್ಲಾ ಸಹಕಾರ್ಯದರ್ಶಿ ಕಾ. ಪ್ರಸನ್ನಕುಮಾರ್ ವಿವರಿಸಿದರು.

ಎ. ಕೆ. ಜಿ. ಸ್ಮಾರಕ ಸ್ತಂಭದ ವಾರ್ಷಿಕೋತ್ಸವ

ಸುಳ್ಯ ತಾಲೂಕು ಕಸಬಾ ಗ್ರಾಮದ ಜಯನಗರ ಎಂಬಲ್ಲಿ ಸ್ಥಾಪಿತಲಾಗಿರುವ ಕಾ. ಎ. ಕೆ. ಜಿ ಸ್ಮಾರಕ ಸ್ತಂಭದ ವಾರ್ಷಿಕೋತ್ಸವವು ಸೆಪ್ಟೆಂಬರ್ 18 ರಂದು ನಡೆಯಿತು. ಅಲ್ಲದೆ ಸ್ತಂಭದ ಬಳಿಯಲ್ಲಿಯೇ ಎ. ಕೆ. ಜಿ. ಸ್ಮಾರಕ ಭವನವನ್ನು ನಿರ್ಮಿಸಲು ಅಡಿಗಲ್ಲು ಹಾಕುವ ಕಾರ್ಯಕ್ರಮವೂ ನಡೆಯಿತು. ಸಿ. ಪಿ. ಐ. (ಎಂ)ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ. ಆರ್. ಶ್ರೀಯಾನರವರು ಶಂಕುಸ್ಥಾಪನೆ ಮಾಡಿದರು. ಸುಳ್ಯ ತಾಲೂಕು ರೈತ ಸಂಘದ ಕಾರ್ಯದರ್ಶಿ ಕಾ. ಕೆ. ಮೋನಪ್ಪಗೌಡರು ಧ್ವಜಾರೋಹಣ ಮಾಡಿದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ. ಕೆ. ಆರ್ ಶ್ರೀಯಾನರವರು ಮಾತನಾಡುತ್ತಾ ಕಾ. ಎ ಕೆ. ಜಿ. ಯವರು ಪಕ್ಷಕ್ಕಾಗಿ ಮಾಡಿದ ತ್ಯಾಗ, ರೈತ ಕಾರ್ಮಿಕರಿಗಾಗಿ ಮಾಡಿದ ಧೀರ ಹೋರಾಟಗಳನ್ನು ವಿವರಿಸಿದರು. ಸಭೆಯಲ್ಲಿ ಕಾ. ಕೆ. ಮೋನಪ್ಪಗೌಡ ಕಾ. ಕೆ. ಸೂರ್ಯನಾರಾಯಣಭಟ್, ಹಾಗೂ ಕಾ. ರಾಬರ್ಟ್ ಮಾತನಾಡಿದರು.

ವಾರ್ಷಿಕ ಮಹಾ ಸಭೆ

ಮಂಗಳೂರಿನ ಕ್ಯಾಶ್ಯೂನಟ್ ಅಂಡ್ ಅಲಾಯ್ಡ್ ವರ್ಕರ್ಸ್ ಯೂನಿಯನ್‌ನ 18 ನೇ ಮಹಾಸಭೆ ಸೆಪ್ಟಂಬರ್ 14 ರಂದು ಸಂಘದ ಉಪಾಧ್ಯಕ್ಷರಾದ ಕಾ ಜಾನಕಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯದರ್ಶಿ ಕಾ. ಕಮಲಾಕ್ಷ ಬಂಗೇರ ಸಭೆಯನ್ನು ಸ್ವಾಗತಿಸಿ, ವಿವಿಧ ಸಂಘಗಳಿಂದ ಬಂದಿದ್ದ ಸೌಹಾರ್ದ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಕಳೆದ ವರ್ಷದ ಚಟುವಟಿಕೆಗಳ ವರದಿ ಮತ್ತು ಲೆಕ್ಕ ಪತ್ರಗಳನ್ನು ಸಭೆಯ ಮುಂದಿಟ್ಟರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಕಾರ್ಮಿಕ ಮುಖಂಡರಾಗಿ ಸೇವೆ ಸಲ್ಲಿಸಿ, ನಿಧನರಾದ ಕಾ, ಕೊರಗಪ್ಪರೈ ಮತ್ತು ಕಾ. ಬಿ. ನಾರಾಯಣ ಅವರಿಗೆ ಸಭೆಯು ಶ್ರದ್ಧಾಂಜಲಿ ಅರ್ಪಿಸಿ ಮೌನ ಆಚರಿಸಲಾಯಿತು.

ಮಹಾಸಭೆಯು ಕೆಳಕಂಡ ಪದಾಧಿಗಳನ್ನು ಆಯ್ಕೆ ಮಾಡಿತು.

ಕಾ. ಪಿ. ರಾಮಚಂದ್ರರಾವ್– ಅಧ್ಯಕ್ಷರು, ಕಾ. ಜಾನಮ್ಮ, ಕಾ. ದೇವಕಿ, ಕಾ. ದೇವಮ್ಮ–ಉಪಾಧ್ಯಕ್ಷರು, ಕಾರ್ಯದರ್ಶಿ ಕಾ. ಕಮಲಾಕ್ಷ ಬಂಗೇರ,

ಸಹ ಕಾರ್ಯದರ್ಶಿಗಳಾಗಿ ಕಾ ಶಾಂಭ ಕಾ. ಯಮುನ ಮತ್ತು ಕಾ. ವಾರಿಜ, ಖಜಾಂಚಿಯಾಗಿ ಕಾ. ಸೀತ ಅವರುಗಳು ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ಕಾ. ಜನಾರ್ಧನ ನಾಯಕ, ಕಾ. ಮೂಸಪ್ಪ, ಕಾ. ಜೆ. ವೀರಪ್ಪ, ಕಾ. ಬಾಬು ದೇವಾಡಿಗ, ಕಾ, ಮಾರಪ್ಪರೈ, ಎಸ್.ಎಫ್.ಐ.ನ ಕಾ. ಸುನಿಲ್ ನಟೇಕರ್ ಮಾತಾಡಿದರು.

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಕರ್ನಾಟಕ ರಾಜ್ಯ ಸಮಾವೇಶ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಆಶ್ರಯದಲ್ಲಿ ಬೆಂಗಳೂರಿನಲ್ಲಿ 2-10-86 ರಂದು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಕರ್ನಾಟಕ ರಾಜ್ಯ ಸಮಾವೇಶವು ನಡೆಯಿತು. ಈ ಸಮಾವೇಶಕ್ಕೆ ಬೆಂಗಳೂರಿನ ವಿಮಾನ ಕಾರ್ಖಾನೆ ದೂರವಾಣಿ ಕಾರ್ಖಾನೆ, ಭಾರತ್ ಎಲೆಕ್ಟ್ರಾನಿಕ್ಸ್, ಬಿ. ಹೆಚ್. ಇ. ಎಲ್. ಬಿ. ಇ. ಎಂ. ಎಲ್., ಜೀವವಿಮೆ, ಸಾಮಾನ್ಯ ವಿಮೆ, ಬ್ಯಾಂಕ್, ಕೆ. ಜಿ. ಎಫ್. ನ ಬಿ.ಇ.ಎಂ.ಎಲ್. ಮತ್ತು ಬಿ.ಜಿ.ಎಂ.ಎಲ್. ಭದ್ರಾವತಿಯ ವಿ.ಐ.ಎಸ್. ಎಲ್. ಹಾಗೂ ಹೆಚ್. ಎಸ್. ಸಿ. ಎಲ್. ಗಳಿಂದ 204 ಪ್ರತಿನಿಧಿಗಳು ಬಂದಿದ್ದರು.

ಸಮಾವೇಶಕ್ಕೆ ಬಂದಿದ್ದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ನಂಜುಂಡಪ್ಪನವರು ಕೇಂದ್ರ ಸರ್ಕಾರವು ಸಾರ್ವಜನಿಕ ಕ್ಷೇತ್ರದ ಖಾಸಗೀಕರಣಕ್ಕೆ ತೊಡಗಿರುವುದು, ಅರ್ಜುನ ಸೇನ್ ಗುಪ್ತ ಸಮಿತಿಯ ಶಿಫಾರಸುಗಳನ್ನು ಜಾರಿ ಮಾಡಹೊರಟಿರುವುದು, ಒಂದು ಕಡೆ ಸಾರ್ವಜನಿಕ ಸಂಸ್ಥೆಗಳನ್ನು ಏಕಸ್ವಾಮ್ಯ ಖಾಸಗಿ ಬಂಡವಾಳದ ಮೇಲ್ವಿಚಾರಣೆಗೆ ಒಳಪಡಿಸಹೊರಟಿರುವುದು, ಇನ್ನೊಂದು ಕಡೆ ಬಹು ರಾಷ್ಟ್ರೀಯ ಸಂಸ್ಥೆಗಳ ಅಧೀನ ಮಾಡಹೊರಟಿರುವುದು, ಈ ಹಿನ್ನೆಲೆಯಲ್ಲಿ ಅಕ್ಟೋಬರ್ 21, 22 ರಂದು ನವದೆಹಲಿಯಲ್ಲಿ ನಡೆಯುವ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮಾವೇಶದ ಮಹತ್ವವನ್ನು ತಿಳಿಸಿದರು. ಈ ಸಮಾವೇಶದಲ್ಲಿ ದೇಶ ಪ್ರೇಮವುಳ್ಳ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು ಮತ್ತು ಅಧಿಕಾರಿಗಳ ಸಂಘಗಳ ಪ್ರತಿನಿಧಿಗಳು ಭಾಗವಹಿಸುತ್ತಾರೆಂದು ತಿಳಿಸಿದರು.

ಸಮಾವೇಶದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್ ರವರು ನಮ್ಮ ದೇಶದಲ್ಲಿ ಸಾರ್ವಜನಿಕ ಕ್ಷೇತ್ರದ ಉಗಮ, ಬೆಳವಣಿಗೆ, ವಿವಿಧ ಹಂತಗಳಲ್ಲಿ ಭಾರತ ಸರ್ಕಾರದ ನೀತಿಯನ್ನು ವಿವರಿಸಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ತಮ್ಮ ಹಿತ ದೃಷ್ಟಿಯಿಂದ ಮಾತ್ರವಲ್ಲದೇ ದೇಶದ ಭವಿಷ್ಯದ ಹಿತದೃಷ್ಟಿಯಿಂದ ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪ್ರಸ್ತುತ ಧೋರಣೆಯನ್ನು ಹಿಮ್ಮೆಟ್ಟಿಸಲು ಅಖಿಲ ಭಾರತ ಸಮಾವೇಶವು ರೂಪಿಸುವ ಚಳುವಳಿಯನ್ನು ಯಶಸ್ವಿಯಾಗಿ ನೆರವೇರಿಸಲು ಪಣ ತೊಡಬೇಕೆಂದು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗೆ ಕರೆ ಕೊಟ್ಟರು.

ಪ್ರತಿಯೊಂದು ಕೇಂದ್ರೋದ್ಯಮ ಸಂಸ್ಥೆಯಿಂದ ಒಬ್ಬೊಬ್ಬರಂತೆ (ಐಟಿಐ ಇಬ್ಬರು) ಒಟ್ಟು ಹತ್ತು ಪ್ರತಿನಿಧಿಗಳು ಸಮಾವೇಶವನ್ನುದ್ದೇಶಿಸಿ ಮಾತನಾಡಿ ಕೇಂದ್ರ ಸರ್ಕಾರದ ನೀತಿಯಿಂದ ತಮ್ಮ ತಮ್ಮ ಕಾರ್ಖಾನೆಗಳಲ್ಲಿ ಯಾವ ರೀತಿ ದುಷ್ಪರಿಣಾಮಗಳಾಗುತ್ತಿವೆಂಬುದನ್ನು ವಿವರಿಸಿದರು.

ನವದೆಹಲಿಯಲ್ಲಿ ನಡೆಯುವ ಅಖಿಲ ಭಾರತ ಸಮಾವೇಶವನ್ನು ಸ್ವಾಗತಿಸಿ ಅದಕ್ಕೆ ಪ್ರತಿಯೊಂದು ಸಂಘವು ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಮನವಿ ಮಾಡುವ, ಸನತ್ ಮೆಹತ ಸಮಿತಿಯ ಶಿಫಾರಸುಗಳಿಗನುಸಾರವಾಗಿ ಕೈಗಾರಿಕಾ ಬಾಂಧವ್ಯಗಳ ಆಯೋಗವನ್ನು ರಚಿಸಿ, ಕೈಗಾರಿಕಾ ವಿವಾದಗಳ ಕಾಯಿದೆ ಮತ್ತು ಕಾರ್ಮಿಕ ಸಂಘಗಳ ಕಾಯಿದೆಗಳನ್ನು ಕಾರ್ಮಿಕ ವಿರೋಧಿ ನಿಟ್ಟಿನಲ್ಲಿ ತಿದ್ದುಪಡಿ ಮಾಡುವ ಕೇಂದ್ರ ಸರ್ಕಾರದ ಉಪ ಕ್ರಮವನ್ನು ವಿರೋಧಿಸುವ, ಹಾಗೂ ಸ್ಥಾಯೀ ನಿಯಮಗಳನ್ನು ತಿದ್ದುಪಡಿ ಮಾಡಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ರಾಜಕೀಯ ಹಕ್ಕುಗಳನ್ನು ಕಸಿದುಕೊಂಡಿರುವುದನ್ನು ಖಂಡಿಸುವ ಮೂರು ನಿರ್ಣಯಗಳನ್ನು ಸಮಾವೇಶವು ಅಂಗೀಕರಿಸಿತು. ಸಮಾವೇಶವು ಅಂಗೀಕರಿಸಿದ ಇನ್ನೊಂದು ನಿರ್ಣಯದಲ್ಲಿ ಗೂರ್ಖಾಲ್ಯಾಂಡ್ ಚಳುವಳಿಯನ್ನು ಪ್ರತ್ಯೇಕತಾವಾದಿ ರಾಷ್ಟ್ರ ವಿರೋಧಿ ಚಳುವಳಿಯೆಂದು ಘೋಷಿಸಬೇಕೆಂದು ಪ್ರಧಾನ ಮಂತ್ರಿಯವರನ್ನು ಒತ್ತಾಯಿಸಿತು.

ಅನಕ್ಷರತೆಯ ಧೋರಣೆಯ ವಿರುದ್ಧ ರಾಷ್ಟ್ರಪತಿಗೆ ಮನವಿ

ಸೆಪ್ಟೆಂಬರ್ 10 ರಂದು ಎಸ್. ಎಫ್. ಐ. ನ ಆರು ಜನ ಸದಸ್ಯರ ನಿಯೋಗವೊಂದು ಭಾರತದ ರಾಷ್ಟ್ರಪತಿಗಳನ್ನು ಭೇಟಿ ಮಾಡಿ ದೇಶದ ವಿದ್ಯಾರ್ಥಿಗಳು ಹಾಗೂ ಯುವ ಜನತೆಯ ಪರಿಸ್ಥಿತಿ ಹಾಗೂ ಅವಶ್ಯಕತೆಗಳ ಬಗ್ಗೆ ಈ ಬೇಡಿಕೆ ಪಟ್ಟಿಯುಳ್ಳ ಒಂದು ಮನವಿ ಪತ್ರವನ್ನು ಸಲ್ಲಿಸಿದರು. ಈ ಬೇಡಿಕೆ ಪಟ್ಟಿಗೆ ದೇಶಾದ್ಯಂತ ಲಕ್ಷಾಂತರ ಮಂದಿ ಸಹಿ ಹಾಕಿದ್ದು ಇವುಗಳಲ್ಲಿ ಸುಮಾರು ಅರ್ಧದಷ್ಟನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದ ಮನವಿಯ ಜತೆಗೆ ಲಗತ್ತಿಸಲಾಗಿತ್ತು. ಉಳಿದವನ್ನು ದೇಶದ ವಿವಿಧ ಕೇಂದ್ರಗಳಲ್ಲಿ ಸಲ್ಲಿಸಲಾಯಿತು. ದೇಶದೆಲ್ಲೆಡೆ ವಿದ್ಯಾರ್ಥಿಗಳು ಹಾಗೂ ಯುವಜನರು "ಸರ್ವರಿಗೂ ಶಿಕ್ಷಣ – ಸರ್ವರಿಗೂ ಉದ್ಯೋಗ" ದಿನಾಚರಣೆಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ಸಲ್ಲಿಸಿದ ಈ ಮನವಿಯಲ್ಲಿನ ಮುಖ್ಯ ಬೇಡಿಕೆಗಳು ಹೀಗಿವೆ—

"ಭಾರತದ ವಿದ್ಯಾರ್ಥಿಗಳಾದ ನಾವು, ಹೊಸ ಶಿಕ್ಷಣ ನೀತಿ ಈಗಾಗಲೇ ತುಂಬಾ ಹೆಚ್ಚಿನ ಮಟ್ಟದಲ್ಲಿರುವ ಅನಕ್ಷರತೆ ಹಾಗೂ ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುವ ಕಾರ್ಯಯೋಜನೆಯೆಂಬ ಸ್ಪಷ್ಟ ಅಭಿಪ್ರಾಯ ಹೊಂದಿದ್ದೇವೆ.

ಈ ರೀತಿ ಈ ಧೋರಣೆಯನ್ನು ತಿರಸ್ಕರಿಸುತ್ತಾ,

* ಶಿಕ್ಷಣ ಹಾಗೂ ಉದ್ಯೋಗದ ಹಕ್ಕನ್ನು ಎಲ್ಲಾ ಭಾರತೀಯ ನಾಗರಿಕರ ಮೂಲಭೂತ ಹಕ್ಕೆಂದು ಪ್ರತಿಷ್ಠಾಪಿಸಬೇಕು.

* ಉತ್ತಮ ಗುಣಮಟ್ಟದ ಶಿಕ್ಷಣ ಸೌಲಭ್ಯಗಳನ್ನು ದೇಶದ ಎಲ್ಲಾ ವಸತಿ ಪ್ರದೇಶಗಳಲ್ಲಿ ಅಂದರೆ ಪ್ರತಿ ಹಳ್ಳಿಯ ಪ್ರತೀ ಶಾಲೆಯಲ್ಲಿ ಒದಗಿಸಬೇಕು; ಇವನ್ನು ನವೋದಯ ವಿದ್ಯಾಲಯಗಳ ಮುಖಾಂತರ ಕೆಲವು ವಿಶಿಷ್ಟ ವಿಭಾಗಗಳ ವಿಶೇಷ ಸೌಲಭ್ಯ ಪಡೆದ ಕೆಲವರಿಗಷ್ಟೆ ಸೀಮಿತಗೊಳಿಸುವುದು ಸಾಧ್ಯವಿಲ್ಲ.

* ಮಧ್ಯಾಹ್ನದ ಊಟ, ಪುಕ್ಕಟೆ ಪಠ್ಯ ಪುಸ್ತಕಗಳು, ಸಮವಸ್ತ್ರಗಳು ಮುಂತಾದ ಸೌಲಭ್ಯಗಳನ್ನು ಎಲ್ಲಾ ಶಾಲಾ ಮಕ್ಕಳಿಗೆ ಒದಗಿಸಿ ಮಕ್ಕಳು ಶಿಕ್ಷಣ ಮುಗಿಸುವ ಮೊದಲೇ ಶಾಲೆ ಬಿಡುವ ಸಮಸ್ಯೆಯನ್ನು ಪರಿಹರಿಸಬೇಕು.

* ಈ ಸೌಲಭ್ಯಗಳನ್ನು ಒದಗಿಸಲು ಕೇಂದ್ರೀಯ ಬಜೆಟ್‌ನಲ್ಲಿ ಕನಿಷ್ಟ 10 ಶೇಕಡಾ ಹಾಗೂ ರಾಜ್ಯಗಳ ಬಜೆಟ್‌ಗಳಲ್ಲಿ ಶೇಕಡಾ 30ನ್ನು ಮೀಸಲಿಡಬೇಕು.

* ಸಾಮಾಜಿಕವಾಗಿ, ಆರ್ಥಿಕವಾಗಿ ವಂಚಿತವಾದ ವಿಭಾಗಗಳ ವಿದ್ಯಾರ್ಥಿಗಳಿಗೆ ಸಕಲ ನೆರವು ನೀಡಲು ಸಾಕಷ್ಟು ಬೆಂಬಲ ಕಾರ್ಯಕ್ರಮಗಳನ್ನು ನಡೆಸಬೇಕು;

* ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ಸರಕಾರ ವಹಿಸಿಕೊಂಡು ಶಿಕ್ಷಣವನ್ನು ಮಾತೃಭಾಷೆಯಲ್ಲಿ ಹಾಗೂ ಎಲ್ಲರೂ ಒಪ್ಪುವ ಜಾತ್ಯತೀತ ಮೌಲ್ಯಗಳಿಗೆ ಅನುಗುಣವಾಗಿಯೇ ನಡೆಯುವಂತೆ ನೋಡಿಕೊಳ್ಳಬೇಕು ;

* ಉದ್ಯೋಗದ ಭರವಸೆ–ಆಗುವರೆಗೆ ನಿರುದ್ಯೋಗ ಭತ್ಯೆ ಹಾಗೂ ಸ್ವಉದ್ಯೋಗಕ್ಕೆ ಸೌಲಭ್ಯಗಳನ್ನು ಒದಗಿಸಬೇಕು.

ಎಂದು ಒತ್ತಾಯಿಸುತ್ತೇವೆ."

ಎಸ್. ಎಫ್. ಐ. ನ ಅಖಿಲ ಭಾರತ ಮುಖಂಡರಾದ ನೇಪಾಲದೇವ್ ಭಟ್ಟಾಚಾರ್ಯ, ಸೀತಾರಾಮ್ ಯೆಚೂರಿ, ಸೈಫುದ್ದೀನ್ ಚೌಧುರಿ ಹಾಗೂ ದಿಲ್ಲೀ ರಾಜ್ಯ ಸಮಿತಿಯ ಪದಾಧಿಕಾರಿಗಳಾದ ಸುಧೀರ್ ಮಾಲಕರ್, ಸುಭೋದ್ ವರ್ಮಾ ಮತ್ತು ಅಶ್ವಿನೀ ದೇಶಪಾಂಡೆ ರಾಷ್ಟ್ರಪತಿಗಳನ್ನು ಭೇಟಿ ಮಾಡಿದ ನಿಯೋಗದ ಸದಸ್ಯರುಗಳು.

ಕೊಲೆ, ಸುಲಿಗೆ, ಅತ್ಯಾಚಾರಗಳಲ್ಲಿ ಕಾಂಗ್ರೆಸ್ ರಾಜ್ಯಗಳು ಮುಂಚೂಣಿಯಲ್ಲಿ

ಉತ್ತರ ಪ್ರದೇಶ

ಕೊಲೆ, ಸುಲಿಗೆ, ದಾರಿ ದರೋಡೆ, ಅತ್ಯಾಚಾರ ಮುಂತಾದ ಆರೋಪಗಳಲ್ಲಿ ಇಂದಿರಾ ಕಾಂಗ್ರೆಸ್ ಆಳುವ ಉತ್ತರ ಪ್ರದೇಶದ ರಾಜ್ಯವೇ ಭಾರತದಲ್ಲಿ ಮೊದಲನೆ ಸ್ಥಾನದಲ್ಲಿದೆ. ಕೇಂದ್ರ ಗೃಹಮಂತ್ರಿ ಖಾತೆಯ ಅಂಕಿಅಂಶಗಳ ವರದಿಯಂತೆ ಪ್ರಸಕ್ತ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಉತ್ತರ ಪ್ರದೇಶದಲ್ಲಿ 2,066 ಕೊಲೆಗಳು ನಡೆದಿವೆ. ಇದೇ ಸಂದರ್ಭದಲ್ಲಿ 855 ಸುಲಿಗೆಗಳು, ಹಾಗೂ 2585 ಹೆದ್ದಾರಿ ದರೋಡೆಗಳು ನಡೆದಿವೆ. ಇದೇ ರಾಜ್ಯದಲ್ಲಿ 414 ಅತ್ಯಾಚಾರಗಳು ನಡೆದಿವೆ.

ಮಧ್ಯಪ್ರದೇಶ

ಮಧ್ಯಪ್ರದೇಶದ ಈ ವರ್ಷದ ಮೊದಲ ಐದು ತಿಂಗಳಲ್ಲಿ 1,104 ಕೊಲೆಗಳು, 114 ಸುಲಿಗೆಗಳು, 986 ಹೆದ್ದಾರಿ ದರೋಡೆಗಳು ನಡೆದಿವೆ. ಅತ್ಯಾಚಾರದಲ್ಲಿ ಮೊದಲನೆ ಸ್ಥಾನ ವಹಿಸಿದ ಮಧ್ಯಪ್ರದೇಶದಲ್ಲಿ 976 ಅತ್ಯಾಚಾರಗಳು ನಡೆದಿವೆ.

ಬಿಹಾರ

ಬಿಹಾರ ರಾಜ್ಯದಲ್ಲಿ ಈ ವರ್ಷದ ಮೊದಲ ಮೂರು ತಿಂಗಳಲ್ಲಿ 759 ಕೊಲೆಗಳು, 789 ಸುಲಿಗೆಗಳು, 600 ಹೆದ್ದಾರಿ ದರೋಡೆಗಳು. 101 ಅತ್ಯಾಚಾರಗಳು ನಡೆದಿವೆ.

ಮಹಾರಾಷ್ಟ್ರ

ಮಹಾರಾಷ್ಟ್ರದಲ್ಲಿ 701 ಕೊಲೆಗಳು, 186 ಸುಲಿಗೆಗಳು, 1119 ಹೆದ್ದಾರಿ ದರೋಡೆ, 256 ಅತ್ಯಾಚಾರಗಳು ನಡೆದಿವೆ.

ರಾಜಸ್ಥಾನ

ರಾಜಸ್ಥಾನದಲ್ಲಿ 539 ಕೊಲೆಗಳು, 30 ಸುಲಿಗೆಗಳು, 582 ದಾರಿ ದರೋಡೆ, 300 ಅತ್ಯಾಚಾರಗಳು ದಾಖಲಾಗಿವೆ.

(7ನೇ ಪುಟ ನೋಡಿ)

ಗಾಂಧಿ ಮತ್ತು ಗಾಂಧಿವಾದ :

ಗಾಂಧಿವಾದ ಎಂದರೇನು? ಎಂಬ ಪ್ರಶ್ನೆಗೆ ಸಮಾಜದ ಸಮಸ್ಯೆಗಳಿಗೆ ಸತ್ಯ ಮತ್ತು ಅಹಿಂಸೆಯ ನೈತಿಕ ಧೋರಣೆಗಳನ್ನು ಅನ್ವಯಿಸುವುದೇ ಗಾಂಧೀವಾದದ ತಿರುಳು ಎಂಬ ಉತ್ತರ ಬರುತ್ತದೆ. ಆದರೆ ಮತ್ತೊಂದು ಪ್ರಶ್ನೆ- ಸರ್ವಕಾಲಿಕವಾದ ಸತ್ಯ, ಸರ್ವಕಾಲವಾದ ನೈತಿಕತೆ ಎಂಬುದೊಂದು ಇದೆಯೆ? ದಿನನಿತ್ಯದ ಸಮಸ್ಯೆಗಳಿಗೆ ಈ ನೀತಿಗಳನ್ನು ಸದಾಕಾಲವೂ ಒಂದೇ ರೀತಿಯಲ್ಲಿ ಅನ್ವಯಿಸಲು ಸಾಧ್ಯವೇ? ಪ್ರಥಮ ಮಹಾಯುದ್ಧ ಕಾಲದಲ್ಲಿ ಯುದ್ಧವನ್ನು ಪಾಪವೆಂದು ಪರಿಗಣಿಸದೆ ಬ್ರಿಟಿಶ್ ಸೇನೆಗೆ ಸೈನಿಕರನ್ನು ಭರ್ತಿಮಾಡಲು ಗುಜರಾತದ ಹಳ್ಳಿ-ಹಳ್ಳಿ ತಿರುಗಾಡಿದ ಗಾಂಧೀಜಿ ಎರಡನೇ ಮಹಾಯುದ್ಧದೊಡನೆ ಯಾವುದೇ ರೀತಿಯ ಸಂಬಂಧವಿಟ್ಟುಕೊಳ್ಳುವುದು ಕೂಡಾ ಪಾಪ ಎಂದೇಕೆ ಭಾವಿಸಿದರು? 1921 ರಲ್ಲಿ ಸರಕಾರ "ಸೈತಾನ" ನದ್ದೆಂದು ಹೇಳಿ ವಿಧಾಯಕ ಸಭೆಗಳನ್ನು ಬಹಿಷ್ಕರಿಸಬೇಕೆಂದ ಗಾಂಧೀಜಿ ಮರುವರ್ಷವೇ ಸ್ವರಾಜ್ಯವಾದಿಗಳಿಗೆ ವಿಧಾಯಕ ಸಭೆಗಳಲ್ಲಿ ಭಾಗವಹಿಸಲು ಅನುಮತಿ ದೊರಕುವಂತೇಕೆ ಮಾಡಿದರು? ಅಸಹಕಾರ ಆಂದೋಲನ, ಕಾನೂನು ಭಂಗ ಚಳುವಳಿ ಮುಂತಾದ ಸಾಮೂಹಿಕ ಕಾರ್ಯಾಚರಣೆಗಳ ಸಮಯದಲ್ಲಿ ಚೌರಿ-ಚೌರಾ ಮುಂತಾದೆಡೆ ಜನಸಮೂಹದಿಂದ ಹಿಂಸೆ ನಡೆಯಿತೆಂದು ಹೇಳಿ ಆಂದೋಲನವನ್ನು ನಿಲ್ಲಿಸಿಯೇ ಬಿಟ್ಟ ಗಾಂಧೀಜಿ 1937 ರಲ್ಲಿ ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಸರಕಾರಗಳು ಜನಗಳ ಮೇಲೆ ಗುಂಡುಹಾರಿಸಿದಾಗ ಅದನ್ನು ಸಮರ್ಥಿಸಿದುದಾಗಲೀ, 1942 ರ ಚಲೇಜಾವ್ ಆಂದೋಲನದ "ಜನಜಂಗುಳಿಯ ಹಿಂಸಾಚಾರ"ವನ್ನು ಸರಕಾರದ ಹಿಂಸಾಚಾರಕ್ಕೆ ಸಹಜ ಪ್ರತಿಕ್ರಿಯೆಯೆಂದುದಾಗಲೀ ಹೇಗೆ?

ಅಂದರೆ ಗಾಂಧೀಜಿಯವರಿಗೂ ಕೂಡಾ ಸಾರ್ವಕಾಲಿಕವಾದ ಸತ್ಯ ಮತ್ತು ನೈತಿಕತೆ ಎಂಬುದಕ್ಕೆ ಆತುಕೊಳ್ಳಲಿಲ್ಲ ಎಂಬುದು ಸ್ಪಷ್ಟ. ಹಾಗಾದರೆ ಗಾಂಧಿವಾದ ಎಂದರೇನು? ಚರಿತ್ರೆಯ ಹಿನ್ನೆಲೆಯಲ್ಲಿ ಗಾಂಧೀಜಿಯ ಭೋದನೆ ಹಾಗೂ ಆಚರಣೆಗಳನ್ನು ಪರಿಶೀಲಿಸಿದರೆ ಸ್ಥೂಲವಾಗಿ ನಾವು ನಾಲ್ಕು ಅಂಶವನ್ನು ಕಾಣಬಹುದು.

ಮೊದಲನೆಯದಾಗಿ, ತಾತ್ತ್ವಿಕವಾಗಿ ಭೌತವಾದಕ್ಕೆ ವಿರುದ್ಧವಾದ ಬೋಧನೆಗಳು ಗಾಂಧೀಜಿಯವು. ಆದರೆ ಅವರು ಈ ಅರ್ಥದಲ್ಲಿ ಮಾತ್ರವಲ್ಲ, ಕೆಲವು ನೈತಿಕ ಹಾಗೂ ರಾಜಕೀಯ ವಿಚಾರಗಳಿಗೆ ತಮ್ಮ ಜೀವನಪರ್ಯಂತ ಬದ್ಧರಾಗಿದ್ದರು ಎಂಬ ಅರ್ಥದಲ್ಲಿ ಕೂಡಾ ಭಾವನಾವಾದಿಯಾಗಿದ್ದರು, ಆದರ್ಶವಾದಿಯಾಗಿದ್ದರು. ಅವರನ್ನು ದಕ್ಷಿಣ ಆಫ್ರಿಕಾದಲ್ಲಿ ಆಂದೋಲನ ಆರಂಭಿಸುವಂತೆ ಮಾಡಿದ್ದು, ಭಾರತದಲ್ಲಿ ಹಲವಾರು ಪ್ರಜಾಸತ್ತಾತ್ಮಕ ಉದ್ದೇಶಗಳಿಗಾಗಿ ಹೋರಾಡಿದ್ದು, ಕೊನೆಗೆ ರಾಷ್ಟ್ರೀಯ ಐಕ್ಯತೆಗಾಗಿ ತಮ್ಮ ಜೀವವನ್ನೇ ಬಲಿಕೊಡುವಂತೆ ಮಾಡಿದ್ದು ಅವರ ಈ ಭಾವನಾವಾದ. ಇನ್ನೊಂದೆಡೆ ತಮ್ಮ ಈ ಭಾವನಾವಾದಿ ನಿಲುವಿನಿಂದಾಗಿಯೇ 1946-47 ರಲ್ಲಿ ಹಿಂದೂ-ಮುಸ್ಲಿಮ್‌ರ ಕೋಮುಗಲಭೆಗಳಿಗೆ ನಿಜವಾಗಿ ಕಾರಣರಾದ ಸಾಮಾಜಿಕ ಶಕ್ತಿಗಳು ಮಾಡುವ, ಕಾಂಗ್ರೆಸ್ಸಿಗರಲ್ಲಿ ಅಧಿಕಾರಲಾಲಸೆ ಹೆಚ್ಚಲು ಕಾರಣವೇನು ಎಂಬುದನ್ನು ಅರಿಯಲಾಗದೆ ಅವರು ತಮ್ಮ ಕೊನೆಗಾಲದಲ್ಲಿ ತೀವ್ರ ದುಃಖಿತರಾಗುವಂತಾಯಿತು ಎಂಬುದೂ ಅಷ್ಟೇ ನಿಜ.

ಎರಡನೆಯದಾಗಿ, ಗಾಂಧೀಜಿಯ ಈ ಭಾವನಾವಾದ

ಗಾಂಧಿಯವರ ಹುಟ್ಟುಹಬ್ಬ ಇದೀಗ ತಾನೆ ಎಲ್ಲೆಡೆ ಆಚರಿಸಲ್ಪಟ್ಟಿದೆ ಅನೇಕ ರೀತಿಯಲ್ಲಿ. ದೆಹಲಿಯ ರಾಜಘಾಟ್‌ನಲ್ಲಿ ಅಹಿಂಸಾವಾದಿ ಗಾಂಧಿಯವರ ಸಮಾಧಿಯ ಬಳಿ ರಾಷ್ಟ್ರಪತಿ, ಪ್ರಧಾನಿ ಇವರೆಲ್ಲರೂ ಗಾಂಧಿಯವರ ನಾಮೋಚ್ಚರಣೆ ಮಾಡುತ್ತಿರುವಾಗಲೇ ಅದಕ್ಕೆ ಭಯೋತ್ಪಾದಕನೊಬ್ಬನ ಗುಂಡಿನ ಹಿಮ್ಮೇಳ.

ಬೆಂಗಳೂರಿನಲ್ಲಿ ನೂರಕ್ಕೂ ಹೆಚ್ಚು ಜನರನ್ನು ಹಿಂದೆ-ಮುಂದೆ ನೋಡದೆ ಕೊಂದ ಗುಂಡೂರಾಯರಿಂದ ಗಾಂಧೀ ಪ್ರತಿಮೆಯ ಮುಂದೆ ಉಪವಾಸ ಸತ್ಯಾಗ್ರಹ.

ಎಲ್ಲಾ ಗಾಂಧಿಯವರ ಹೆಸರಿನಲ್ಲೇ

ಗಾಂಧಿಯವರ ಹೆಸರನ್ನು ಬಳಸದ, ಅವರ ಘೋಷಣೆಗಳನ್ನು ಉಗ್ಗಡಿಸದ ರಾಜಕೀಯ ಪಕ್ಷಗಳುಂಟೇ ನಮ್ಮ ದೇಶದಲ್ಲಿ – ಕಮ್ಯುನಿಸ್ಟರ ವಿನಾ.

ಇದು ಒಂದೆಡೆ ಗಾಂಧಿಯವರ ಪ್ರಾಮುಖ್ಯತೆಯನ್ನು ತೋರಿಸಿದರೆ ಮತ್ತೊಂದೆಡೆ ಅವರ ವಾದವನ್ನು ಹೇಗೆ ಹಿಗ್ಗಾ-ಮುಗ್ಗಾ ಎಳೆಯಬಹುದೆಂಬುದನ್ನೂ ತೋರಿಸುತ್ತದೆ.

ಗಾಂಧಿಯವರ ರಾಮರಾಜ್ಯದ ಕನಸು

ಗಾಂಧಿಯವರು ಸ್ವತಂತ್ರ ಭಾರತದ ಬಗ್ಗೆ ಕಂಡ ಹಗಲುಗನಸೇ-ರಾಮರಾಜ್ಯ, ನಿಜವಾದ ಅರ್ಥದಲ್ಲಿ ಗ್ರಾಮರಾಜ್ಯ. ಒಮ್ಮೆ ಟಾಟಾ ಬಿರ್ಲಾರ ಮಂದಿರದ ಆಶ್ರಮದಲ್ಲಿ ಮತ್ತೊಮ್ಮೆ ಸಾಬರಮತಿ ವಾರ್ಧಾ ಆಶ್ರಮಗಳಲ್ಲಿ ಕಂಡ ಈ ಹಗಲುಗನಸಿನ ಗ್ರಾಮಭಾರತ ಸ್ವಾತಂತ್ರ್ಯ ನಂತರದಲ್ಲಿ ಅನೇಕ ಜನರನ್ನು ಅನೇಕ ರೀತಿಯಲ್ಲಿ ಕಾಡಿದೆ. ಮುಖ್ಯವಾಗಿ ಕೇಂದ್ರ ಸರಕಾರ-ರಾಜ್ಯ ಸರಕಾರಗಳು ತಮ್ಮ ಕಾರ್ಯಕ್ರಮಗಳನ್ನು ರೂಪಿಸುವಾಗ ತೋರಿಕೆಗಾದರೂ ಈ ರಾಮರಾಜ್ಯದ ತುಣುಕುಗಳನ್ನು ಸೇರಿಸಲು ಪ್ರಯತ್ನಪಟ್ಟರೆ, ಸರ್ಕಾರದ ಯೋಜನೆಗಳನ್ನು ಟೀಕಿಸುವವರಿಗೆ, ಈ ಯೋಜನೆಗಳ ರೂಪುರೇಷೆಗಳೇ ತಪ್ಪು ಎನ್ನುವವರಿಗೆ ಕೂಡ ಈ ರಾಮರಾಜ್ಯದ ಕಲ್ಪನೆಯೇ ಆಧಾರ.

[illegible]ಗೆ ಸರ್ಕಾರದ ಯೋಜನೆಗಳನ್ನು [illegible]ವವರಲ್ಲಿ ಸರ್ಕಾರದಿಂದ ಹೊರಗುಳಿದರೂ ಅವರಿಂದ ಅನೇಕ ರೀತಿಯ ಆರ್ಥಿಕ ನೆರವು ಪಡೆದು, ಅಷ್ಟೇ ಅಲ್ಲ ಅಮೇರಿಕ, ಪ. ಜರ್ಮನಿ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳ ಗುತ್ತೆದಾರಿ ಬಂಡವಾಳಶಾಹಿಗಳು, ಕ್ರೈಸ್ತಮಿಷನರಿಗಳ ಉದಾರ ಧನಸಹಾಯ ಪಡೆದೂ ಕೂಡ ತಾವೇ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳ ವಾರಸುದಾರರೆಂದುಕೊಳ್ಳುತ್ತಿರುವ, ಸರ್ವೋದಯದ, ಭೂಧಾನದ ಪ್ರವರ್ತಕರು, ಅನುಯಾಯಿಗಳು ಒಂದು ಕಡೆ, ಇನ್ನೊಂದು ಕಡೆ ಕಾಂಗ್ರೆಸ್‌ನ ವಿರೋಧಿಗಳೆನ್ನುವ ಸಮಾಜವಾದಿಗಳು – ಲೋಹಿಯವಾದಿಗಳು ಕರ್ನಾಟಕದ ಲೋಹಿಯಾವಾದಿಗಳೆಲ್ಲ ಗಾಂಧೀಮಂತ್ರವನ್ನು ಜಪಿಸಿದ್ದೂ ಜಪಿಸಿದ್ದೆ.

ಈ ರಾಮರಾಜ್ಯದ ಕಲ್ಪನೆ ಎಂತಹದು? ಅದರ ಹೂರಣವೇನು?

ರಸ್ಕಿನ್, ಟಾಲ್‌ಸ್ಟಾಯ್, ಥೋರೋ ಮೊದಲಾದವರ ಗ್ರಂಥಗಳನ್ನು ಪಠಿಸಿದ, ಕ್ರೈಸ್ತಧರ್ಮದ-ಅದರಲ್ಲಿಯೂ ಮಿಷನರಿಗಳ ತೀವ್ರ ಪ್ರಭಾವಕ್ಕೆ ಒಳಗಾದ ಗುಜರಾ[illegible] ವೈಷ್ಣವಧರ್ಮದ ಅನುಯಾ[illegible] ಗಾಂಧಿಯವರ ಕಲ್ಪನೆ ಈ ರಾಮರಾಜ್ಯ.

"ರಾಜ್ಯಗಳಳಿಯಲಿ ರಾಜ್ಯಗಳುಳಿಯಲಿ ತನ್ನಿಕಾರ್ಯವ ಬಿಡನೆಂದು" ತಮ್ಮ ತಮ್ಮ ಕೆಲಸದಲ್ಲಿ ತೊಡಗಿದ್ದ ಶತ ಶತಮಾನಗಳಿಂದ ಯಾವುದೇ ಬದಲಾವಣೆ ಕಾಣದ ಹಳ್ಳಿಗಳು ಬ್ರಿಟಿಷರ ಕಾಲ್ತುಳಿತಕ್ಕೆ ಸಿಕ್ಕಿ ನುಚ್ಚುನೂರಾಗುವ ಸಂಭವ ಬಂದಾಗ ನಾಶವಾಗುತ್ತಿದ್ದ ನಿಂತ ನೀರಿನಂತಿದ್ದ ಬದುಕನ್ನು ವೈಭವೀಕರಿಸಿ ಅಸಂಖ್ಯ ಜನರನ್ನು ಆಕರ್ಷಿಸಿದ್ದು ಈ ರಾಮರಾಜ್ಯ. "ಮರಳಿ ಹಳ್ಳಿಗೆ"– "ಮರಳಿ ಮಣ್ಣಿಗೆ" ಎಂಬ ಬಂಡವಾಳಶಾಹಿಯ ನೀರಸ, ನರಕಸದೃಶ ಬದುಕಿನಿಂದ ಪಾರಾಗಲು ಪಾಶ್ಚಾತ್ಯ ಬುದ್ಧಿಜೀವಿಗಳು ಕಂಡ ಹಗಲುಗನಸಿನ ಭಾರತೀಯ ರೂಪ ಈ ರಾಮರಾಜ್ಯ.

ರಷ್ಯನ್ ಸಮಾಜವಾದಿಕ್ರಾಂತಿ ಹಾಗೂ ಸೋವಿಯತ್ ಒಕ್ಕೂಟದ ಪಂಚವಾರ್ಷಿಕಯೋಜನೆಗಳ ಯಶಸ್ಸು ಭಾರತ ಸ್ವಾತಂತ್ರ್ಯ ಹೋರಾಟಗಾರರ ಮನಸ್ಸನ್ನು ಆಕರ್ಷಿಸುತ್ತಿದ್ದಾಗ ಭಾರತದ ಬಂಡವಾಳಶಾಹಿಗಳು ಭಾರತಕ್ಕೆ ಒಂದು ಯೋಜನೆಯನ್ನು - ಬಾಂಬೇಪ್ಲಾನ್– [illegible]ದ್ದಾಗ ಅದಕ್ಕೆ ಪರ್ಯಾಯವಾಗಿ ಹುಟ್ಟಿದ್ದು ಗಾಂಧಿಯೋಜನೆ ರಾಮರಾಜ್ಯದ ಕಲ್ಪನೆ-

1922 ರಲ್ಲಿ, 1933 ರಲ್ಲಿ ಅಸಹಕಾರ ಚಳುವಳಿ, ಕಾನೂನುಭಂಗ ಚಳುವಳಿ ಈಗ ಇಷ್ಟು ಸಾಕು ಇನ್ನೂ ಮುಂದುವರೆಸಿದರೆ ನಮ್ಮ ಹಿಡಿತ ತಪ್ಪೀತು ಎಂದೆನಿಸಿದಾಗ ಅದರಿಂದ ಹಿಂದೆಸರಿದು ಆಶ್ರಮ ಸೇರಿ ಜನರನ್ನು ಎಬ್ಬಿಸಿ ಚಳುವಳಿಗೆ ಹಚ್ಚುತ್ತಿದ್ದ ಅಸಂಖ್ಯ ಕಾರ್ಯಕರ್ತರನ್ನು ಬೇರೆಡೆಗೆ ತಿರುಗಿಸಲು, ಆದರೂ ಭಾರತೀಯ ಗ್ರಾಮೀಣರ ಸಂಬಂಧವನ್ನು ಉಳಿಸಿಕೊಳ್ಳಲು ಹುಟ್ಟಿದ "ರಚನಾತ್ಮಕ ಕಾರ್ಯಕ್ರಮ" ರಾಮರಾಜ್ಯ.

ಹೀಗೆ 1920ರ ನಂತರ, 1930ರ ನಂತರ ಗಾಂಧೀಜಿ ತೊಡಗಿದ ಖಾದಿ ಗ್ರಾಮೋದ್ಯೋಗ ಹರಿಜನೋದ್ಧಾರ ಮೂಲ ಶಿಕ್ಷಣ, ಗ್ರಾಮ ನೈರ್ಮಲ್ಯ ಇತ್ಯಾದಿಗಳೇ ಇದರ ಹೂರಣ.

1937ರ ಪ್ರಾಂತ ಚುನಾವಣೆಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಅನೇಕ ಪ್ರಾಂತಗಳಲ್ಲಿ ಅಧಿಕಾರಕ್ಕೆ ಬಂದಾಗ ಈ ಕಾರ್ಯಕ್ರಮಗಳು ಸರ್ಕಾರದ ಕಾರ್ಯಕ್ರಮಗಳು. ಒಂದು ಕಡೆ ಆಗತಾನೆ ಚಿಗುರೊಡೆದು ತೀವ್ರವಾದ ಗ್ರಾಮೀಣ ಬಡವರ, ವಿದ್ಯಾರ್ಥಿಗಳ, ಕಾರ್ಮಿಕರ ಚಳುವಳಿಗಳ ಮರ್ದನ ಮತ್ತೊಂದು ಕಡೆ ಅಖಿಲ ಭಾರತ ಮೂಲಭೂತ ಶಿಕ್ಷಣ, ಅಖಿಲಭಾರತ ಗುಡಿ ಕೈಗಾರಿಕೆಗಳ ಸಮ್ಮೇಳನ ಮೊದಲಾದ ಕಾರ್ಯಕ್ರಮಗಳು ಜೊತೆ ಜೊತೆಗೆ ನಡೆಯುತ್ತಿದ್ದವು. ಎಂಬುದನ್ನು ಗಮನಿಸಬೇಕು. ಈ ಸಮಿತಿಗಳಲ್ಲಿ ಕ್ರಿಶ್ಚಿಯನ್ ಮಿಷಿನರಿಗಳಿಗೂ ಸ್ಥಾನವಿತ್ತು.

ಸ್ವಾತಂತ್ರ್ಯನಂತರ ತೆಲಂಗಾಣ ಹೋರಾಟ ತೀವ್ರ ರೀತಿಯಲ್ಲಿ ಬೆಳೆದು ಬಂದಾಗ ಅದನ್ನೆದುರಿಸಲು ಬಂದ ಭೂದಾನ ಚಳುವಳಿ, ಸರ್ವೋದಯಗಳು ಇದೇ ರಚನಾತ್ಮಕ ಕಾರ್ಯಕ್ರಮ'ದ ಮುಂದುವರಿಕೆಗಳೇ,

ಗಾಂಧಿಯವರ ಕನಸಿನ ಈ ರಾಮರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳು, ಬೃಹತ್ ಯೋಜನೆಗಳಿಗೆ ಸ್ಥಾನವಿಲ್ಲ. ಅವು ಸೈತಾನನ ಅಪರಾವತಾರ. ಗ್ರಾಮೀಣ ಬಡಜನತೆ ಉದ್ಯೋಗವಿಲ್ಲದೆ ಸತ್ತರೂ ಕೈಗಾರಿಕೆಗಳು ಬೇಡ. ಜನತಾ ಪಕ್ಷದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೂ ಕೂಡ ಕಾರ್ಮಿಕರ ಚಳುವಳಿಯನ್ನು ಬಗ್ಗುಬಡಿಯಲು ರೈತರನ್ನು – ಗ್ರಾಮೀಣ ಬಡವರನ್ನು ಅವರ ವಿರುದ್ಧ ಎತ್ತಿಕಟ್ಟಲು ಆಗಾಗ್ಗೆ ಎರಡು ಭಾರತಗಳಿವೆ ಒಂದು ಗ್ರಾಮ ಭಾರತ, ಮತ್ತೊಂದು ನಗರ ಭಾರತ ಎಂದುಹೇಳುತ್ತಿಲ್ಲವೆ?

'ಸಣ್ಣದ್ದೆಲ್ಲಾ ಸುಂದರವಾದ್ದು' ಎನ್ನುವ ಹಗಲು ಕನಸಿನ ಸಮಾಜವಾದಿಗಳಿಗೆ ಈ ಗಾಂಧೀಜಿ ಕಂಡ ರಾಮರಾಜ್ಯ ಅಪ್ಯಾಯಮಾನವಾದದ್ದರಲ್ಲಿ ಏನಾಶ್ಚರ್ಯ. ಈ ರಾಮರಾಜ್ಯವನ್ನು ಅವರ ಹೆಗಲ ಮೇಲೆಂಸಿ ಕುಣಿಸುತ್ತಾ ಮೆರೆಸುವುದರಲ್ಲಿ ಏನಾಶ್ಚರ್ಯ.

ಒಂದು ಪರಿಶೀಲನೆ

ಅದುವರೆಗೆ ನಿದ್ರಾವಸ್ಥೆಯಲ್ಲಿದ್ದ ಗ್ರಾಮೀಣ ಬಡವರನ್ನು ಜಾಗೃತಗೊಳಿಸುವಲ್ಲಿ ಒಂದು ದೊಡ್ಡ ಪಾತ್ರ ವಹಿಸಿತು. ಅವರ ಅರೆ-ಧಾರ್ಮಿಕ ನುಡಿಗಟ್ಟುಗಳು, ಸರಳ ಜೀವನ ಇವೆಲ್ಲಾ ಲಕ್ಷಗಟ್ಟಲೆ ಗ್ರಾಮೀಣ ಬಡವರನ್ನು ಅವರತ್ತ ಸೆಳೆದವು. ಗಾಂಧೀಜಿ ದೇವರ ಹೊಸದೊಂದು ಅವತಾರ ಎಂದವರು ಬಗೆಯುವಂತಾಯಿತು ರೈತರಲ್ಲಿ ಜಾಗೃತಿ ಗಾಂಧೀಜಿಗಿಂತ ಮೊದಲು ಇರಲೇ ಇಲ್ಲವೆಂದೇನಲ್ಲ. ಪ್ರಥಮ ಮಹಾಯುದ್ಧದ ನಂತರದ ಘಟನೆಗಳು ಹಳ್ಳಿಯ ಜನಗಳ ಮೇಲೂ ಸಾಕಷ್ಟು ಪ್ರಭಾವವುಂಟು ಮಾಡಲಾರಂಭಿಸಿದ್ದವು. ಆದರೂ ತಮ್ಮ ಮೊದಲಿದ್ದ ಕಾಂಗ್ರೆಸ್‌ನ ಬೂರ್ಜ್ವಾ ಮುಖಂಡರು ಮತ್ತು ಹಳ್ಳಿಯ ರೈತಾಪಿಗಳ ನಡುವಿನ ಕಂದರವನ್ನು ಮುಚ್ಚಿ ಅವರನ್ನು ರಾಷ್ಟ್ರೀಯ ಪ್ರಜಾಪ್ರಭುತ್ವ ಆಂದೋಲನಕ್ಕೆ ಸೆಳೆದ ಕೀರ್ತಿ ಬಹಳ ಮಟ್ಟಿಗೆ ಗಾಂಧೀಜಿಯವರಿಗೆ ಸಲ್ಲುತ್ತದೆ.

ಮೂರನೆಯದಾಗಿ, ಗಾಂಧೀಜಿಯವರು ಹಳ್ಳಿಯ ಬಡವರನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಆಂದೋಲನಕ್ಕೆ ಸೆಳೆಯುವ ಕ್ರಾಂತಿಕಾರೀ ಕೆಲಸಮಾಡಿದ್ದ ಪ್ರತಿಗಾಮಿಯೆಂದು ನಿಸ್ಸಂಶಯವಾಗಿಯೂ ಕರೆಯಬಹುದಾದ ತಮ್ಮ ಸಾಮಾಜಿಕ-ಆರ್ಥಿಕ ದೃಷ್ಟಿಕೋನದಿಂದಲೇ. ಇನ್ನೊಂದು ವಿರೋಧಾಭಾಸದಂತೆ ಕಾಣುವ ಸಂಗತಿಯೇನೋ ನಿಜ. ಆದರೆ ಇದು ನಮ್ಮ ದೇಶದ ರಾಜಕೀಯದಲ್ಲೇ ಹುದುಗಿರುವ ಪ್ರತಿಫಲನವಷ್ಟೆ. ಎಂಬುದನ್ನು ಗಮನಿಸಬೇಕು. ಏಕೆಂದರೆ ನಮ್ಮ ದೇಶದ ರಾಷ್ಟ್ರೀಯ ಪ್ರಜಾಪ್ರಭುತ್ವ ಆಂದೋಲನ ಪಾಳೆಯಗಾರಿಕೆಯ ವಿರುದ್ಧವಾಗಿ ಬೆಳೆದೆ, ಅದರ ಜತೆಗೆ ಸಂಬಂಧವೇರ್ಪಡಿಸಿಕೊಂಡಿದ್ದ ಬೂರ್ಜ್ವಾ ನೇತೃತ್ವದ ಚಳುವಳಿಯಾಗಿತ್ತು. ಆಂದೋಲನದ ಈ ಸ್ವಭಾವದಿಂದಾಗಿ 1947 ರಲ್ಲಿ ನಾವು ಪಡೆದ ಸ್ವಾತಂತ್ರ್ಯ ಹಾಗೂ ನಂತರದ ಬೆಳವಣಿಗೆಗಳ ಮೇಲೆ ಯಾವ ರೀತಿಯ ದುಷ್ಪರಿಣಾಮ ಉಂಟಾಯಿತು ಎಂಬುದನ್ನು ನಾವೀಗಾಗಲೇ ಅನುಭವಿಸುತ್ತಿದ್ದೇವೆ

ತಾವು ಯಾವ ಮನುಷ್ಯನ ಪುನರುತ್ಥಾನಕ್ಕಾಗಿ ಜೀವನವಿಡೀ ಅಹಿಂಸೆಯ ಸಿದ್ಧಾಂತ ಹಾಗೂ ಆಚರಣೆಯನ್ನು ರೂಪಿಸಿದರೋ, ಅದೇ ಮನುಷ್ಯ ಧರ್ಮದ ಹೆಸರಿನಲ್ಲಿ ಕೊಲೆ ನಡೆಸುವುದನ್ನು ಕಂಡು ಆತ್ಮಸ್ಥೈರ್ಯವನ್ನೇ ಕಳಕೊಂಡುತೀವ್ರ ಖಿನ್ನರಾಗಿದ್ದ ಗಾಂಧೀಜಿ ಅದೇ ಸಮಯದಲ್ಲಿ ರಿನ್ ನಾವಿಕರ ಸಾಮ್ರಾಜ್ಯಶಾಹಿ-ವಿರೋಧಿ ಬಂಡಾಯದಲ್ಲಿ ಕಂಡು ಬಂದ ಹಿಂದೂ-ಮುಸ್ಲಿಂ ದುಡಿಯುವ ಜನಗಳ ಐಕ್ಯತೆಯನ್ನು ಕಂಡು ಸಂತಸಪಡುವ ಬದಲು ಅದು ಹಿಂಸೆಗೆ ಆಹ್ವಾನವೆಂದು ಹೌಹಾರಿದ್ದು ತಮ್ಮ ಈ ಪ್ರತಿಗಾಮಿ ದೃಷ್ಟಿಕೋನದಿಂದಾಗಿಯೇ ಎಂಬುದನ್ನು ನಾವು ಮರೆಯಬಾರದು.

ನಾಲ್ಕನೆಯದಾಗಿ, ಜನಸಾಮಾನ್ಯರನ್ನು ರಾಷ್ಟ್ರೀಯ ಆಂದೋಲನಕ್ಕೆ ಸೆಳೆದು ಆ ಚಳುವಳಿಯ ಒಂದು ದೊಡ್ಡ ದೌರ್ಬಲ್ಯವನ್ನು ನೀಗಿಸುವಲ್ಲಿ ಗಾಂಧೀಜಿ ಶ್ಲಾಘನೀಯ ಪಾತ್ರವಹಿಸಿದರೂ ಕೂಡಾ. ಕೊನೆಯವರೆಗೂ ಅವರು ಗ್ರಾಮೀಣ ಜನತೆ ಒಂದು ಸ್ವತಂತ್ರಶಕ್ತಿಯಾಗಿ ಕಾರ್ಯಾಚರಣೆಗಿಳಿಯುವ ಬಗ್ಗೆ ಸದಾ ಭಯಪಡುತ್ತಿದ್ದರು. ಕಾರ್ಮಿಕ ವರ್ಗ ಹಾಗೂ ಇತರ ದುಡಿಯುವ ಜನ ವಿಭಾಗಗಳ ಬಗ್ಗೆಯೂ ಅವರದ್ದು ಇದೇ ನಿಲುವಾಗಿತ್ತು. ಇವರೆಲ್ಲಾ ತಮ್ಮ ಬೂರ್ಜ್ವಾ ವರ್ಗದ ನೇತೃತ್ವದ ಮಿತಿಯೊಳಗೆ ವರ್ತಿಸುವಂತೆ ಅವರು ನೋಡಿಕೊಂಡರು. ಇದೊಂದು ಕಟುವಾಸ್ತವ ಸಂಗತಿ ಇದನ್ನು ಅರಿಯಲಾರದ ಯಾವುದೇ ವ್ಯಕ್ತಿ ಗಾಂಧೀಜಿಯ ಅಹಿಂಸಾ ತತ್ವದ ಆಚರಣೆಯಲ್ಲಿ ಕಂಡುಬಂದ (ಈ ಲೇಖನದ ಆರಂಭದಲ್ಲಿ ಹೇಳಿದೆ) ವಿರೋಧಾಭಾಸಗಳ ಬಗ್ಗೆ ವಿವರಣೆ ನೀಡಲು ಅಸಮರ್ಥನಾಗುತ್ತಾನೆ.

ಬೂರ್ಜ್ವಾ ಸಿದ್ಧಾಂತ-ಆಚರಣೆ

ಗಾಂಧೀಜಿಯ ಟ್ರಸ್ಟೀಶಿಪ್ ಸಿದ್ಧಾಂತ, ಅಹಿಂಸೆಯ ಮೇಲೆ ವಿಪರೀತ ಒತ್ತು, ತಮ್ಮ ರಚನಾತ್ಮಕ ಕಾರ್ಯಕ್ರಮ, ಸತ್ಯಾಗ್ರಹ ಮುಂತಾದ ಸಂಸದೀಯೇತರ ಚಟುವಟಿಕೆಗಳನ್ನು ತಮ್ಮ ಸಹಾಯಕ ಬೂರ್ಜ್ವಾ ಮುಖಂಡರ ಸಂಸದೀಯ ಚಟುವಟಿಕೆಗಳೊಂದಿಗೆ ಸಮರಗೊಳಿಸಿದ ಅವರ ನೈಪುಣ್ಯ, ಸಾಮ್ರಾಜ್ಯಶಾಹೀ ಶತ್ರುವಿನೊಂದಿಗೆ ಒಂದೆಡೆ ಮಾತುಕತೆಗೆ ಪೂರ್ಣ ಅವಕಾಶ ಇಟ್ಟುಕೊಳ್ಳುತ್ತಾ, ಇನ್ನೊಂಡೆಡೆ ನೇರ ಸಾಮೂಹಿಕ ಕಾಯಾಚರಣೆಯ ಬೆದರಿಕೆಯನ್ನು ಸದಾ ಜೀವಂತವಾಗಿಡುತ್ತಿದ್ದ ಅವರ ಕಾರ್ಯನೀತಿ ಭಾರತದ ಉದಯೋನ್ಮುಖ ಬೂರ್ಜ್ವಾ ವರ್ಗಕ್ಕೆ ಜನಸಾಮಾನ್ಯರನ್ನು ತಮ್ಮ ಬಿಗಿ ನೇತೃತ್ವದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಕಾರ್ಯಾಚರಣೆಗಿಳಿಸಲು ಮತ್ತು ಅದರ

(6 ನೇ ಪುಟ ನೋಡಿ)

ಗಾಂಧಿವಾದವೆಂದರೇನು ?
ಗಾಂಧಿಯವರ ವ್ಯಕ್ತಿತ್ವ ಎಂತಹದು ? ಓದಿ.

ಇ. ಎಂ. ಎಸ್. ರವರ "ಮಹಾತ್ಮ ಮತ್ತು ಅವರ ವಾದ" ದ ಆಧಾರ.

ಗಾಂಧಿವಾದದ ಸೈದ್ಧಾಂತಿಕ ಹೂರಣ

ಗಾಂಧೀವಾದ ಒಂದು ಸುಸಂಬದ್ಧ ರಾಜಕೀಯ-ಸಾಮಾಜಿಕ ಸಿದ್ಧಾಂತವಾಗಲಿ, ತತ್ವಜ್ಞಾನವಾಗಲಿ ಅಲ್ಲವೆಂದು ಸಾಧಿಸುವುದು ಹೆಚ್ಚಿನ ಕಷ್ಟದ ಕೆಲಸವಲ್ಲದಿದ್ದರೂ, ಇಂದಿನ ಭಾರತದಲ್ಲೇ ಏಕೆ ವಿಶ್ವದಲ್ಲಿ ಗಾಂಧಿವಾದ ವಿವಿಧ ಹಂತಗಳಲ್ಲಿ ಘಟನೆಗಳನ್ನು ರೂಪಿಸುತ್ತದೆ ಎನ್ನುವುದನ್ನು ಅಲ್ಲಗಳೆಯಲಾಗದು. ನಮ್ಮ ದೇಶದಲ್ಲಂತೂ ಗಾಂಧೀವಾದ ಅಧಿಕೃತ ಸಿದ್ಧಾಂತ ಅಥವಾ ತತ್ವಶಾಸ್ತ್ರದ ಸ್ಥಾನಕ್ಕೇರಿದೆ. ಬಹಳಷ್ಟು ದೇಶ ಪ್ರೇಮಿ ಜನರು ದೇಶದ ಇಂದಿನ ಸಮಸ್ಯೆಗಳಿಗೆ ಗಾಂಧಿಯ ತತ್ವಗಳ ಅನುಷ್ಠಾನದ ಅಭಾವವೇ ಕಾರಣ ಎಂದು ನಂಬಿದ್ದಾರೆ. ವಿಶ್ವದಲ್ಲಿ ಸಹ ಶಾಂತಿ ಚಳುವಳಿಯಲ್ಲಿ ಗಾಂಧಿಯ ತತ್ವಗಳಿಗೆ ಮಾರು ಹೋದವರಿದ್ದಾರೆ. ರಿಚರ್ಡ್ ಅಟೆನ್ ಬರೋ "ಗಾಂಧಿ" ಚಿತ್ರ ತಯಾರಿಸಲು ಪ್ರೇರೇಪಿಸಿದ ಸಂಗತಿಗಳು ಮತ್ತು ಚಿತ್ರ ಗಿಟ್ಟಿಸಿದ ಪ್ರತಿಕ್ರಿಯೆ ಇದಕ್ಕೆ ಸಾಕ್ಷಿ. ನಮ್ಮ ದೇಶದಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ವಿಶ್ವದಲ್ಲಿ ಕೂಡಾ ಇಂದಿನ ಸೈದ್ಧಾಂತಿಕ ಹೋರಾಟಗಳಲ್ಲಿ ಸಂಘರ್ಷಗಳಲ್ಲಿ ಗಾಂಧಿವಾದ ಇತರ ವಾದಗಳ ಜತೆಗೆ ಸ್ಪರ್ಧಿಸಿದೆ.

ಈ ಸಂದರ್ಭದಲ್ಲಿ ಗಾಂಧೀವಾದದ ವರ್ಗ ನೆಲೆಗಳು, ಮೂಲಗಳನ್ನು

(6 ನೇ ಪುಟ ನೋಡಿ)

ಗಾಂಧಿ ಉವಾಚ....

"ವೈದ್ಯಕೀಯ ವಿಜ್ಞಾನ ಕರಾಳ ಮಾಟ ವಿದ್ಯೆಯ ಕ್ರೋಢೀಕೃತ ತಿರುಳಷ್ಟೆ. ಉನ್ನತ ವೈದ್ಯಕೀಯ ನೈಪುಣ್ಯತೆಯೆಂದೇ ನಿಡೆಯೋ ಅದಕ್ಕಿಂತ ಅಳಲೇಕಾಯಿ ನಕಲಿ ವೈದ್ಯ ಎಷ್ಟೋ ವಾಸಿ...... ಆಸ್ಪತ್ರೆಗಳು ಸೈತಾನದ ಸಾಧನಗಳು........ ಅವಿಲ್ಲದಿದ್ದರೆ ಗುಹ್ಯರೋಗಗಳೇ ಇರುತ್ತಿರಲಿಲ್ಲ, ನಮ್ಮಲ್ಲಿ ಲೈಂಗಿಕ ದುರ್ಗುಣಗಳಿರುತ್ತಿರಲಿಲ್ಲ............ರೈಲ್ವೇ, ಟೆಲಿಗ್ರಾಫ್, ಆಸ್ಪತ್ರೆಗಳು, ವಕೀಲರು, ಡಾಕ್ಟರುಗಳು ಮುಂತಾದವೆಲ್ಲಾ ಹೋಗಲೇಬೇಕು"

–ಗಾಂಧೀಜಿಯ "ಹಿಂದ್ ಸ್ವರಾಜ್" ಕೃತಿಯಿಂದ

ಬತ್ತಿದ ಗಾಂಧಿ

1947 ಆಗಸ್ಟ್ **15** ರಂದು ನಾಡಿನಲ್ಲೆಲ್ಲಾ ಸ್ವಾತಂತ್ರ್ಯದ ಆಚರಣೆ. ಆಗ ಸಂದೇಶಕ್ಕಾಗಿ ಗಾಂಧೀಜಿ ಬಳಿ ಬಂದಾಗ "ನಾನು ಬತ್ತಿಹೋಗಿದ್ದೇನೆ........ಯಾವ ಸಂದೇಶವೂ ನನ್ನ ಬಳಿ ಇಲ್ಲ" ಎಂದರು ಗಾಂಧಿ.

1948 ಜನವರಿ **26**–"ಈ ದಿನ ಸ್ವಾತಂತ್ರ್ಯ ದಿನ. ನಾವು ಕಂಡಿರದ, ಮುಟ್ಟಿರದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ ಅದು ಸೂಕ್ತವಾಗಿತ್ತು. ಈಗ ! ನಾವದನ್ನು ಮುಟ್ಟಿನೋಡಿ, ಭ್ರಮನಿರಸನ ಹೊಂದಿದಂತಾಗಿದ್ದೇವೆ".

ಯಾವುದು "ಸತ್ಯ" ?

ಗಾಂಧೀಜಿ 1941 ರಲ್ಲಿ–"ಬ್ರಿಟಿಶರ ಸ್ವಾತಂತ್ರ್ಯವೇ ಆಪತ್ತಿನಲ್ಲಿರುವಾಗ ಅವರೊಡನೆ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡುವುದು ಹೇಗೆ ?.........ನಮ್ಮ ವಾಕ್‌ಸ್ವಾತಂತ್ರ್ಯವನ್ನು ಅವರು ಒಪ್ಪಿದರೆ ಸಾಕು"

1942 ರಲ್ಲಿ "ಬ್ರಿಟಿಶರು ಸಿಂಗಪುರ, ಮಲಯಾ ಹಾಗೂ ಬರ್ಮಾದಲ್ಲಾದ ಆಪತ್ತು ತನಗೆ ಬಂದಿರಬೇಕಾದರೆ ಒಂದು ವ್ಯವಸ್ಥಿತ ರೀತಿಯಲ್ಲಿ ಅವರು ತೊಲಗಬೇಕು ಎಂಬುದು ನನ್ನ ದೃಢ ಅಭಿಪ್ರಾಯ"

ಯುದ್ಧ - ಅಹಿಂಸೆ–ವಾಸ್ತವತೆ

"ಸ್ವರಾಜ್ಯ ಪಡೆಯುವ ಅತೀ ಸುಲಭದ ಹಾಗೂ ನೇರ ಮಾರ್ಗವೆಂದರೆ (ಬ್ರಿಟಿಶ್) ಸಾಮ್ರಾಜ್ಯದ ರಕ್ಷಣೆಯಲ್ಲಿ ಭಾಗವಹಿಸುವುದು.... ನಮ್ಮ ಹಕ್ಕುಗಳನ್ನು ಈಗಲೇ ಪಡೆಯದಿದ್ದರೆ ಮುಂದೆ ನಾವು ವಂಚಿತರಾಗುತ್ತೇವೆ ಎಂದು ಕೆಲವರೆನ್ನುತ್ತಾರೆ. ಸಾಮ್ರಾಜ್ಯದ ರಕ್ಷಣೆಯ ಮೂಲಕ ಪಡೆದ ಶಕ್ತಿ ನಮಗೆ ಆ ಹಕ್ಕುಗಳನ್ನು ಕೊಡಬಲ್ಲುದು"

—ಪ್ರಥಮ ಮಹಾ ಯುದ್ಧದಲ್ಲಿ ಗಾಂಧೀಜಿ.

"ಈ ಯುದ್ಧ ನನ್ನನ್ನು ಹಿಂದೆಂದಿಗಿಂತಲೂ ಹೆಚ್ಚು ದಿಗಿಲುಗೊಳಿಸಿದೆ. ಆದರೆ ಇದು ನನ್ನನ್ನು ಹಿಂದಿನ ಯುದ್ಧದಂತೆ ಸ್ವಯಂ ನೇಮಿತ ಸೇನಾ ಭರ್ತಿ ಸಾರ್ಜೆಂಟ್ ಆಗದಂತೆ ತನ್ನನ್ನು ತಡೆಯುತ್ತಿದೆ."

—ದ್ವಿತೀಯ ಮಹಾ ಯುದ್ಧ ಆರಂಭವಾದಾಗ–1939ರಲ್ಲಿ

"ತಕ್ಷಣ ಭಾರತದ ಸ್ವಾತಂತ್ರ್ಯದ ಘೋಷಣೆ ಮಾಡಿ, ಕೇಂದ್ರೀಯ ಅಸೆಂಬ್ಲಿಗೆ ಜವಾಬ್ದಾರವಾದ ಒಂದು ರಾಷ್ಟ್ರೀಯ ಸರಕಾರ ರಚಿಸಿದರೆ ಆಗಸ್ಟ್ 1942ರ ಸಾಮೂಹಿಕ ಕಾನೂನುಭಂಗ ಚಳುವಳಿಯನ್ನು ಹಿಂತೆಗೆದುಕೊಳ್ಳಲು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಸಲಹೆ ಮಾಡಲು ನಾನು ಸಿದ್ಧ.........ಆದರೆ ನಾನು ನಿಮ್ಮ ಕೈಯಲ್ಲಿದ್ದೇನೆ"

1944ರಲ್ಲಿ ವೈಸರಾಯ್‌ಗೆ ಬರೆದ ಪತ್ರದಲ್ಲಿ.

ಗಾಂಧೀಜಿ ಮತ್ತು ದುಡಿಯುವ ಜನ

1921ರ ಗಾಂಧೀಜಿಯ ಅಸಹಕಾರ ಚಳುವಳಿಯನ್ನು ಆರಂಭಿಸ ಬೇಕಾದವರು "ಇದುವರೆಗೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತಿರುವ, ಪ್ರತಿನಿಧಿಸುವ ವರ್ಗಗಳು"—ಅಂದರೆ ಬೂರ್ಜ್ವಾ ಮತ್ತು ಕಿರು - ಬೂರ್ಜ್ವಾ ವರ್ಗಗಳು. ಅದ್ದರಿಂದ ಸಹಜವಾಗಿಯೇ ಆ ಚಳುವಳಿಯ ಏಳು ಬೇಡಿಕೆಗಳಲ್ಲಿ ಮಧ್ಯಮ, ಬಡ ರೈತರಿಗೆ, ಕಾರ್ಮಿಕರಿಗೆ ಸಂಬಂಧಪಟ್ಟ ಒಂದು ಅಂಶವೂ ಇರಲಿಲ್ಲ.

1930 ರಲ್ಲಿ ಕಾನೂನು ಭಂಗ ಚಳುವಳಿಯನ್ನು ವಾಪಸು ಪಡೆಯಲು ಯಾವ ಹನ್ನೊಂದು ಬೇಡಿಕೆಗಳನ್ನು "ಸ್ವಾತಂತ್ರ್ಯದ ತಿರುಳು" ಎಂದು ಗಾಂಧೀಜಿ ಮಂಡಿಸಿದರೋ ಅವುಗಳಲ್ಲಿ ನೇರವಾಗಿ ದುಡಿಯುವ ಜನಸಮೂಹಗಳಿಗೆ ಸಂಬಂಧಪಟ್ಟ ಬೇಡಿಕೆ ಕೇವಲ ಒಂದೇ—ಭೂಕಂದಾಯದಲ್ಲಿ ಶೇ. 50 ಕಡಿತ.

1942ರ"ಚಲೇಜಾವ್" ಚಳುವಳಿಯಲ್ಲಿ ಗಾಂಧೀಜಿಯ ಠರಾವಿನಲ್ಲಿ ಪತ್ರಿಕಾಕರ್ತರಿಗೆ, ರಾಜ - ಮಹಾರಾಜರುಗಳಿಗೆ, ಸರ್ಕಾರಿ ನೌಕರರಿಗೆ ಸೈನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ವಿಶೇಷ ಮನವಿಗಳಿದ್ದವು. ಆದರೆ ಬಹುಸಂಖ್ಯೆಯಲ್ಲಿರುವ ಕಾರ್ಮಿಕರು ಮತ್ತು ರೈತರ ಪ್ರಸ್ತಾಪವೂ ಇಲ್ಲ. ಬಹುಶಃ ಅವರ ಪಾತ್ರ "ಮಾಡು ಇಲ್ಲವೆ ಮಡಿ" ಘೋಷಣೆಗಾಗಿ ಮೌನವಾಗಿ ಬಲಿಯಾಗಲು ಸಿದ್ಧವಿರಬೇಕಾದ "ಜನ ಜಂಗುಳಿ" ಯದಷ್ಟೆ !

ಗಾಂಧಿವಾದ—ಒಂದು ಪರಿಶೀಲನೆ

(5 ನೇ ಪುಟದಿಂದ)

ಜೊತೆಗೇ ಹೀಗೆ ಜಾಗೃತರಾದ ಜನಸಾಮಾನ್ಯರು ಬೂರ್ಜ್ವಾ ವರ್ಗವನ್ನೇ ನುಂಗಬಹುದಾದ ಕ್ರಾಂತಿಕಾರಿ ಸಾಮೂಹಿಕ ಆಚರಣೆಗಿಳಿಯದಂತೆ ತಡೆಯುವಲ್ಲಿ ಒಂದು ಅತ್ಯಂತ ಸಮರ್ಥ ಸಾಧನವಾಗಿ ನೆರವಾಯಿತು ಎಂಬುದು ಚಾರಿತ್ರಿಕ ಸತ್ಯ.

ಆದ್ದರಿಂದಲೇ ಗಾಂಧೀಜಿಯೊಡನೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಭಾರತದ ಬೂರ್ಜ್ವಾ ವರ್ಗಕ್ಕೆ ಗಾಂಧೀಜಿಯವರನ್ನು ತಮ್ಮ ನಿರ್ವಿವಾದ ಮುಖಂಡನಾಗಿ ಒಪ್ಪಿಕೊಂಡಿತು ಗಾಂಧೀಜಿ ಮತ್ತು ಬೂರ್ಜ್ವಾ ಮುಖಂಡರ ನಡುವೆ ಭಿನ್ನಾಭಿಪ್ರಾಯಗಳು ಬಂದಾಗಲೆಲ್ಲಾ ಅವರಿಬ್ಬರೂ ತಾತ್ಕಾಲಿಕವಾಗಿ ಬೇರೆ ದಾರಿ ಹಿಡಿಯಲು ಪರಸ್ಪರ ಒಪ್ಪಿಕೊಂಡು, ವಾಸ್ತವವಾಗಿ ಪರಸ್ಪರ ಪೂರಕವಾಗಿಯೇ ದುಡಿದರು ಎಂಬುದು ಭಾರತದ ಸ್ವಾತಂತ್ರ್ಯ ಆಂದೋಲನದ ಇತಿಹಾಸವನ್ನು ಕಂಡರೆ ತಿಳಿಯುತ್ತದೆ.

ಆದ್ದರಿಂದ ಗಾಂಧಿವಾದವೆಂಬುದು ಅದರ ಆದರ್ಶವಾದೀ ಅಂಶಗಳನ್ನೆಲ್ಲಾ ಪಕ್ಕಕ್ಕೆ ಸರಿಸಿ ನೋಡಿದರೆ ವಾಸ್ತವದಲ್ಲಿ ಭಾರತದ ಬೂರ್ಜ್ವಾ ವರ್ಗದ ಸಿದ್ಧಾಂತ ಮತ್ತು ಆಚರಣೆಯೆಂದರೆ ತಪ್ಪಾಗುವುದಿಲ್ಲ.

ಸ್ವಾತಂತ್ರ್ಯದ ನಂತರ ಕೂಡಾ ಭೂಮಿಯ ಪ್ರಶ್ನೆಗೆ ಕಮ್ಯುನಿಸ್ಟ ನೇತೃತ್ವದಲ್ಲಿ ತೆಲಂಗಾಣಾ ರೈತರು ತೋರಿದ ಮಾರ್ಗ ಹಾಗೂ ಕಾಂಗ್ರೆಸ್ ಸರ್ಕಾರದ ಶಾಸನಮೂಲಕ ಮಾರ್ಗಕ್ಕೆ ಪರ್ಯಾಯವೆಂದು ಬಂದ ಭೂದಾನ–ಗ್ರಾಮದಾನ, ಆಂದೋಲನ ಕ್ರಮೇಣ ಕಾಂಗ್ರೆಸ್ ಆಳರಸರ ರಾಜಾಶ್ರಯ ಪಡೆದು, ಕಾಂಗ್ರೆಸ್‌ನಲ್ಲಿ ಒಡಕುಂಟಾದಾಗ ರಾಜಕೀಯೇತರ ಎಂದು ಹೇಳಿಕೊಳ್ಳುತ್ತಿದ್ದ ಸರ್ವೋದಯ ಆಂದೋಲನದಲ್ಲೂ ಒಡಕು ಕಂಡು ಬಂದು ಇಬ್ಬರು ಪ್ರಮುಖ ಗಾಂಧೀವಾದಿ ಮುಖಂಡರುಗಳಾದ ವಿನೋಬಾ ಹಾಗೂ ಜೆ ಪಿ. ಪರಸ್ಪರ ವಿರುದ್ಧ ನಿಲ್ಲುವಂತಾಯಿತು ಎಂಬ ಅಂಶ ಗಾಂಧೀವಾದದ ನಿಜವಾದ ರಾಜಕೀಯ ನೆಲೆ ಏನು ಎಂಬುದನ್ನು ತೋರಿಸಿ ಕೊಟ್ಟಿದೆ.

ಗಾಂಧಿವಾದದ ಸೈದ್ಧಾಂತಿಕ ಹೂರಣ

(5 ನೇ ಪುಟದಿಂದ)

ಗುರುತಿಸುವುದು ಅಗತ್ಯವಾಗಿದೆ. ಗಾಂಧೀವಾದ ರೂಪುಗೊಂಡದ್ದು ಇಂಡಿಯಾದಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟ ಎಲ್ಲ ವರ್ಗಗಳನ್ನು ಆವರಿಸುತ್ತಿದ್ದ ಕಾಲದಲ್ಲಿ. ಸ್ವಾತಂತ್ರ ಹೋರಾಟದ ಬೂರ್ಜ್ವಾ ವರ್ಗದ ನಾಯಕತ್ವ ದಿನನಿತ್ಯದ ಸಮಸ್ಯೆಗಳಿಗೆ ಅಗತ್ಯಗಳಿಗೆ ಸ್ಪಂದಿಸುವ ಒಟ್ಟಾರೆ ಮಾರ್ಗದರ್ಶನ ತತ್ವಗಳನ್ನು ರೂಪಿಸುವ ಪ್ರಯತ್ನ ಗಾಂಧಿವಾದದ ತಿರುಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ನೀಡಿದೆ. ಇದಲ್ಲದೆ ಗಾಂಧಿ ಒಬ್ಬ ವ್ಯಕ್ತಿಯಾಗಿ ವಿವಿಧ ಹಂತಗಳಲ್ಲಿ ಒಳಗಾದ ಸೈದ್ಧಾಂತಿಕ ಪ್ರಭಾವಗಳೂ ಗಾಂಧಿವಾದದ ಮೇಲೆ ಪರಿಣಾಮ ಬೀರಿವೆ.

ಗಾಂಧಿ ಬೆಳೆದ ಪರಿಸರ ಬಂಗಾಳ, ಮಹಾರಾಷ್ಟ್ರಗಳಂತೆ ಯಾವುದೇ ರೀತಿಯ ಸುಧಾರಣಾ ಚಳುವಳಿ ನಡೆಯದ ಗುಜರಾತಿನ ಪೋರಬಂದರಿನಲ್ಲಿ ಅವರು ಬಾಲ್ಯದಿಂದಲೂ ಅಳವಡಿಸಿಕೊಂಡದ್ದು ಹಿಂದೂ ಧಾರ್ಮಿಕತೆಯ ದೃಷ್ಟಿಕೋನ. ಗುಜರಾತಿನಲ್ಲಿ ಪ್ರಬಲವಾಗಿದ್ದ ವೈಷ್ಣವ ಪಂಥ ಅವರ ಮೇಲೆ ಪ್ರಭಾವ ಬೀರಿತ್ತು. ವಕಾಲತ್ ಕಲಿಯಲು ಇಂಗ್ಲೆಂಡಿಗೆ ತೆರಳಿದ ಮೇಲೂ ಯಾವುದೇ ಪ್ರಗತಿಪರ ಚಳುವಳಿ, ಸಿದ್ಧಾಂತಗಳ ಪ್ರಭಾವ ಅವರ ಮೇಲೆ ಆಗಲಿಲ್ಲ. ಆ ಅವಧಿಯಲ್ಲಿ ಅವರನ್ನು ಬಾಧಿಸುತ್ತಿದ್ದದ್ದು "ಶುದ್ಧ ಶಾಕಾಹಾರಿಯಾಗಿ ಮುಂದುವರಿಯುವುದು ಹೇಗೆ ಎಂಬುದಷ್ಟೆ ! ಗಾಂಧಿಯ ಮೇಲೆ ಸೈದ್ಧಾಂತಿಕವಾಗಿ ಅತ್ಯಂತ ಹೆಚ್ಚು ಪ್ರಭಾವಿಸಿದ ಕೃತಿ ಜಾನ್ ರಸ್ಕಿನನ "Upto The Last" ಬಂಡವಾಳಶಾಹಿಯ ಪರಿಣಾಮವಾಗಿ ಸಮಾಜದ ಮೇಲೆ ಮಾನವತೆಯ ವಿನಾಶ, ಹಳೆಯ ಮೌಲ್ಯಗಳ ಮೇಲೆ ಆಘಾತಕ್ಕೆ ಪೆಟ್ಟಿ ಬೂರ್ಶ್ವಾ ವರ್ಗದ ಪ್ರತಿಕ್ರಿಯೆಯಾಗಿ ಬಂದ "ಪ್ರಕೃತಿಗೆ ಮರಳಿ" ಸಿದ್ಧಾಂತ ಮತ್ತು ಅರಾಜಕತಾವಾದದಿಂದ ಗಾಂಧಿ ತುಂಬಾ ಪ್ರಭಾವಿತರಾಗಿದ್ದರು. ಈ ಪಂಥಕ್ಕೆ ಸೇರಿದ ಜಾನ್ ರಸ್ಕಿನ್, ಡೇವಿಡ್ ಥೋರೋ, ಟಾಲ್‌ಸ್ಟಾಯ್ ಕೃತಿಗಳಿಗೆನೇ ಗಾಂಧಿಯ ಅಧ್ಯಯನ ಸೀಮಿತವಾಗಿತ್ತು. ಆಗ ಪ್ರಚಲಿತವಿದ್ದ ಹಲವು ಸಿದ್ಧಾಂತಗಳ ತುಲನಾತ್ಮಕ ಅಧ್ಯಯನ ಮಾಡುವ ಇಚ್ಛೆ ಗಾಂಧಿಗಿರಲಿಲ್ಲ. "ಗಾಂಧಿವಾದ" ಯಾವ ಸಂದರ್ಭದಲ್ಲಿ ಹೇಗೆ ಪಾಳೆಯಗಾರಿ ವರ್ಗದೊಂದಿಗೆ ಸಮಜಾಯಿಷಿ ಮಾಡಿಕೊಂಡಿದ್ದ ಬೂರ್ಜ್ವಾವರ್ಗದ ನಾಯಕತ್ವದ (ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟದ ಘಟ್ಟದಲ್ಲಿ) ಸಿದ್ಧಾಂತವಾಗಿ ಅಂಗೀಕೃತವಾಯಿತು ಎಂದು ಇದರ ಜತೆಗಿರುವ ಲೇಖನದಲ್ಲಿ ಸಿದ್ಧಪಡಿಸಲಾಗಿದೆ.

ಸ್ವಾತಂತ್ರ್ಯನಂತರದ ಘಟ್ಟದಲ್ಲಿ ಸಹ ಗಾಂಧೀವಾದದ ಹಲವು ಅಂಶಗಳು ಭಾರತದ ಬೂರ್ಜ್ವ-ಭೂಮಾಲಿಕ ಆಳುವ ವರ್ಗಗಳಿಗೆ ಅನುಕೂಲಕರವಾಗಿರುವುದು ಮತ್ತು ಈ ವರ್ಗಗಳ ಪ್ರಾಬಲ್ಯವೇ ಗಾಂಧಿವಾದದ ಸೈದ್ಧಾಂತಿಕ ಪ್ರಭಾವ ಇಂದಿಗೂ ಕಂಡುಬರಲು ಕಾರಣ ಈ ಸಂದರ್ಭದಲ್ಲಿ ದುಡಿಯುವ ವರ್ಗಗಳ ಹೋರಾಟ ಪ್ರಬಲವಾಗಿ ರೂಪುಗೊಂಡು ಮಾರ್ಕ್ಸ್ ವಾದ—ಲೆನಿನ್‌ವಾದಿ ಸಿದ್ಧಾಂತವನ್ನು ಈ ವರ್ಗಗಳು ತಮ್ಮ ಮಾರ್ಗದರ್ಶಕ ಸೂತ್ರಗಳು ಎಂದು ಮನಗಂಡಲ್ಲಿ ಗಾಂಧಿವಾದ ಮೂಲೆ ಗುಂಪಾಗಿದೆ ಎಂಬುದನ್ನೂ ಗಮನಿಸಬೇಕು. ಕೆಲವು ದೇಶಪ್ರೇಮಿ ಜನರು ಅಂದುಕೊಳ್ಳುವಂತೆ ದೇಶದಲ್ಲಿ ಇಂದು ಪರಿಸ್ಥಿತಿ ಗಾಂಧಿ ತತ್ವಗಳ ಅನುಷ್ಠಾನ ನಡೆಯದ್ದರಿಂದ ಉಂಟಾದುದಲ್ಲ. ಗಾಂಧಿ ತತ್ವಗಳು ಬೇರೆಬೇರೆ ರೂಪದಲ್ಲಿ ಅನುಷ್ಠಾನಕ್ಕೆ ತಂದಿದ್ದಾಗ್ಯೂ ಮತ್ತು ಹಲವು ಬಾರಿ ಅದರಿಂದಾಗಿಯೇ ದೇಶದ ಸಮಸ್ಯೆಗಳು ಉಲ್ಬಣಗೊಂಡಿವೆ ಎಂಬುದು ನಿಜಸಂಗತಿ.

ಇದಕ್ಕೆ ಒಂದು ಒಳ್ಳೆಯ ಉದಾಹರಣೆ ಜಾತ್ಯತೀತತೆ. ಇಂದಿಗೂ ದೇಶದಲ್ಲಿ ಪ್ರಚಲಿತವಿರುವುದು ಗಾಂಧಿಯ ಜಾತ್ಯತೀತ ಪರಿಕಲ್ಪನೆಯೇ ಎಲ್ಲಾ ಧರ್ಮಗಳಿಗೂ ಸರ್ಕಾರದಿಂದ ಸಮಾನ ಗೌರವ ಮತ್ತು ಜನರ ಧಾರ್ಮಿಕ, ಮತ್ತು ಪುನರುತ್ಥಾನವಾದಿ ಭಾವನೆಗಳಿಗೆ ಕುಮ್ಮಕ್ಕು ನೀಡುವುದು ಈ ಪರಿಕಲ್ಪನೆಯ ಸಾರಾಂಶ. ಸರ್ಕಾರಿ ಕಲಾಪಗಳಿಂದ ಧರ್ಮವನ್ನು ಪ್ರತ್ಯೇಕಗೊಳಿಸುವ ಮತ್ತು ಜನರ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನೆತ್ತಿಕೊಂಡು ಕ್ರಮೇಣ ಧಾರ್ಮಿಕ ಮತೀಯ ಮತ್ತಿತರ ಪ್ರತ್ಯೇಕತಾ ಭಾವನೆಯನ್ನು ಕಡಿಮೆ ಮಾಡುವ ಜನಪರ-ಜಾತ್ಯತೀತ ನೀತಿ ಇಂದಿನ ಆಳುವ ವರ್ಗಗಳ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ, ಗಾಂಧೀವಾದಕ್ಕೂ ಹೊರತಾಗಿತ್ತು. ಗಾಂಧಿವಾದಿ "ಜಾತ್ಯತೀತತೆ" ದೇಶದ ಐಕ್ಯತೆ, ಸಮಗ್ರತೆ ಮತ್ತು ದುಡಿಯುವ ಜನಪರ ಹೋರಾಟಕ್ಕೆ ಒಡ್ಡುತ್ತಿರುವ ಅಡ್ಡಿ ಈಗ ಸಾಕಷ್ಟು ಸ್ಪಷ್ಟವಾಗಿಯೇ ಇದೆ.

ಟ್ರಸ್ಟೀಶಿಪ್ ಸಿದ್ಧಾಂತದ ಮೇಲೆ ಆಧಾರಿತವಾದ ಟ್ರೇಡ್ ಯೂನಿಯನ್ ಸಂಘಟನೆಯ ಸ್ವರೂಪವೇ ಆಳುವ ಪಕ್ಷದ ಮತ್ತು ಇತರ ಸುಧಾರಣವಾದಿ ಸಂಘಟನೆಗಳಿಗೆ ಆದರ್ಶವಾಗಿದೆ. ಸರ್ಕಾರ ನಡೆಸುವ ಕಾರ್ಮಿಕರ ಶಿಕ್ಷಣ ಶಿಬಿರಗಳಲ್ಲೂ ಮಾಲಿಕರೊಂದಿಗೆ ಮಾತುಕತೆ ಮಾಡಿ ಸಮಜಾಯಿಷಿ ಮಾಡಿಕೊಳ್ಳುವ, ಕಾರ್ಮಿಕ ವರ್ಗದ ಆಯುಧವಾದ ಮುಷ್ಕರವನ್ನು ನಿರಾಕರಿಸುವ ಪಾಠವನ್ನು ಹೇಳಿ, ಕಾರ್ಮಿಕ ವರ್ಗವನ್ನು ತನ್ನ ನಿಯಂತ್ರಣದಲ್ಲಿಡುವ ಕೆಲಸ ನಡೆದಿದೆ. ಈ ಕೆಲಸಕ್ಕೆ ಗಾಂಧಿಯ ಬಗ್ಗೆ ಕಾರ್ಮಿಕರಿಗಿರುವ ಗೌರವ, ಪಾಳೆಯಗಾರಿ ಮೌಲ್ಯಗಳ ಪ್ರಭಾವವನ್ನು ಪೂರ್ಣವಾಗಿ ಉಪಯೋಗಿಸಲಾಗುತ್ತಿದೆ. ದೇಶದ ಪ್ರಗತಿಗೆ ಪ್ರಬಲ ಒತ್ತಾಯ ತರಬಲ್ಲ ಶಕ್ತಿಯುಳ್ಳ ಏಕಮಾತ್ರ ವರ್ಗವನ್ನು ಬಂಡವಾಳಶಾಹಿ ವರ್ಗದ ಗುಲಾಮನನ್ನಾಗಿಸುವುದರಲ್ಲಿ ಗಾಂಧೀವಾದ ಶಾಮಿಲಾಗಿದೆ. ಕಾರ್ಮಿಕರ ಹೋರಾಟ ಮಾತ್ರವಲ್ಲದೆ, ಯಾವುದೇ ಪ್ರಬಲ ಜನಪರ ಹೋರಾಟಗಳ ಮೇಲೆ ಮಸಿ ಬಳಿಯಲು, ಇಂತಹ ಹೋರಾಟಗಳ ಪ್ರಾಮುಖ್ಯತೆಯನ್ನು ಮರೆಮಾಡಲು ಗಾಂಧಿವಾದಿ 'ಅಹಿಂಸೆ" ಅಸ್ತ್ರವನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಜನ ಹೋರಾಟಗಳ ಹರವನ್ನು ಸೀಮಿತಗೊಳಿಸುವ "ಸತ್ಯಾಗ್ರಹ"ದ ಪರಿಕಲ್ಪನೆಯನ್ನು ಸಹ ಇದೇ ಪರಿಣಾಮಕ್ಕಾಗಿ ಬಳಸಲಾಗುತ್ತಿದೆ.

ಸರ್ವೋದಯದ, ಆದರ್ಶವಾದಿ ಸ್ವಯಂಸೇವಕ ಸಂಘಟನೆಗಳು

"ರಾಜಕೀಯದಿಂದ ದೂರವಿದ್ದು" ಹಳ್ಳಿಯ ಮಟ್ಟದಲ್ಲಿ ಬೆಳವಣಿಗೆ ಮತ್ತು ಸಮಾನತೆ ತರಬಹುದು ಎಂದು ಆದರ್ಶವಾದಿ ಯುವಕರನ್ನು ಭ್ರಮೆಗೆ ಒಳಪಡಿಸುತ್ತಿರುವುದು ಒಂದುಕಡೆಯಾದರೆ, ಇನ್ನೊಂದುಕಡೆ ಇಂತಹ ಸಂಘಟನೆಗಳನ್ನು ಸಾಮ್ರಾಜ್ಯಶಾಹಿ "ಸಹಾಯ ಧನ" ದ ಮೂಲಕ ನಿಯಂತ್ರಿಸಿ ದೇಶದ ಮೇಲೆ ಹೆಚ್ಚಿನ ಹಿಡಿತ ಸಾಧಿಸುವ ಪ್ರಯತ್ನಕ್ಕೆ ಸಹಾಯಕಾರಿಯಾಗಿದೆ. ಸ್ವಯಂಸೇವಕ ಸಂಘಟನೆಗಳು ಎಡ ಚಳುವಳಿಯನ್ನು ಚಿವುಟಿಹಾಕುವ, ಬುಡದಲ್ಲೇ ಹತ್ತಿಕ್ಕುವ ಸಾಮ್ರಾಜ್ಯಶಾಹಿ ಪ್ರಯತ್ನದ ಮುಖ್ಯ ಅಂಗ.

ದುಡಿಯುವ ವರ್ಗದ ಹೋರಾಟವನ್ನು ಪ್ರಬಲವಾಗಿ ಬೆಳೆಸುವುದು ಮತ್ತು ಇದಕ್ಕೆ ಹಾನಿಕಾರಕವಾದ ಗಾಂಧಿವಾದದ ಬಂಡವಾಳಶಾಹಿಗಳೊಡನೆ ಶಾಮೀಲಿನ ತತ್ವಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸುವುದು ಹಾಸುಹೊಕ್ಕಾಗಿ ನಡೆಯಬೇಕಾಗಿದೆ.

ಎಸ್ ಎಫ್ ಐ ಗೆ ಭಾರೀ ಜಯ ಎ ಬಿ ವಿ ಪಿ ಗೆ ಮುಖಭಂಗ

1986–87ನೇ ಸಾಲಿಗೆ ಸರಕಾರಿ ಕಾಲೇಜಿನಲ್ಲಿ ಪ್ರತಿ ವರ್ಷದಂತೆ ಈ ವರ್ಷವು, ವಿದ್ಯಾರ್ಥಿ ಸಂಘದ ಚುನಾವಣೆ ಬಿರುಸಿನಿಂದ ಜರುಗಿದವು. ಪ್ರತಿ ವರ್ಷದಂತೆ ಎಸ್. ಎಫ್. ಐ. ತನ್ನ ಅಭ್ಯರ್ಥಿಗಳನ್ನು ಸಂಘಟನೆಯ ಬ್ಯಾನರ ಅಡಿಯಲ್ಲಿ ನಿಲ್ಲಿಸಿತ್ತು. ಕಾಲೇಜಿನಲ್ಲಿ ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಸಹಕಾರ್ಯದರ್ಶಿ ಹಾಗೂ ಮಹಿಳಾ ಪ್ರತಿನಿಧಿಗೆ ನೇರ ಚುನಾವಣೆಗಳು ನಡೆಯುತ್ತವೆ. ಅಲ್ಲದೆ ವರ್ಗ ಪ್ರತಿನಿದಿಗಳು ಚುನಾಯಿತರಾಗುತ್ತಾರೆ.

ಎ. ಬಿ. ವಿ. ಪಿ. ಚುನಾವಣೆಯಲ್ಲಿ ಗೆಲ್ಲಲು, ತನ್ನ ಸಂಘಟನೆಯ ಬ್ಯಾನರ ಬಿಟ್ಟು ಮುಖವಾಡ ಧರಿಸಿಕೊಂಡು "ಪಕ್ಷೇತರ ಒಕ್ಕೂಟ" ರಚಿಸಿತ್ತು. ಇನ್ನೊಂದು ವಿದ್ಯಾರ್ಥಿಗಳ ಗುಂಪು "ಸ್ವತಂತ್ರಪಕ್ಷೇತರರ ಒಕ್ಕೂಟ" ರಚಿಸಿದ್ದವು. ಎಸ್. ಎಫ್. ಐ. ಸಂಘಟನೆ ಮೂರು ದಿನ ಅತಿ ಬಿರುಸಿನಿಂದ ಚುನಾವಣಾ ಪ್ರಚಾರ ಕೈಗೊಂಡು ಪಕ್ಕದ ಹಳ್ಳಿಗಳಾದ ಕಾರಟಗಿ, ಸಿರಗುಪ್ಪ, ಮಾನ್ವಿ, ಮಸ್ಕಿ, ಕಲ್ಮಂಗಿ, ತುರ್ವಿಹಾಳ, ತಾವರಾಗೇರಗಳಿಗೆ ತೆರಳಿ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಓಟು ಯಾಚಿಸಿತು. ಅಲ್ಲದೆ ಕಾಲೇಜು ನಡೆಯುವ ಸಂದರ್ಭದಲ್ಲಿ ಸಭೆ ಜರುಗಿಸಿ ಎಸ್. ಎಫ್. ಐ. ನಿಲುವು, ಎಸ್. ಎಫ್. ಐ. ಸಾಧನೆ, ಎಸ್. ಎಫ್. ಐ. ಟೀಕೆಗೆ ಉತ್ತರ ಹೀಗೆ ಸುಮಾರು ಎಂಟು ಸಭೆಗಳನ್ನು ಜರುಗಿಸಿ ಭಾಷಣ ಮಾಡಲಾಯಿತು. ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳನ್ನು ಸೇರಿಸಿ ದೊಡ್ಡ ಸಭೆಯನ್ನು ಜರುಗಿಸಲಾಯಿತು. ಎಸ್. ಎಫ್. ಐ. ಜಿಲ್ಲಾ ಸಮಿತಿ ಉಪಾಧ್ಯಕ್ಷ ಕಾ. ಎಸ್. ರಾಮನಗೌಡ ಮತ್ತು ಹಿಂದಿನ ವರ್ಷದ ಸಹಕಾರ್ಯದರ್ಶಿ ಕಾ. ಬಿ. ಪ್ರಸಾದ ಇನ್ನಿತರ ಸಂಗಾತಿಗಳು ಚುನಾವಣೆಯ ಬಗ್ಗೆ ಮಾತನಾಡಿದರು.

ಎ. ಬಿ. ವಿ. ಪಿ. ಒಕ್ಕೂಟ ಒಂದು ಜೀಪು ಇತರ ವಾಹನಗಳನ್ನು ಅಲ್ಲದೇ ಸ್ವತಂತ್ರ ಪಕ್ಷೇತರರ ಒಕ್ಕೂಟ ಜೀಪು, ವ್ಯಾನು ಹಲವಾರು ದ್ವಿಚಕ್ರವಾಹನಗಳನ್ನು ಧಾರಾಳವಾಗಿ ಉಪಯೋಗಿಸಿದವು. ಎ. ಬಿ. ವಿ. ಪಿ. ಸುಮಾರು ಮೂರು ಸಾವಿರ ಸ್ವತಂತ್ರ ಪಕ್ಷೇತರರ ಒಕ್ಕೂಟ ಸುಮಾರು 7–8 ಸಾವಿರ ರೂಪಾಯಿಗಳನ್ನು ಚುನಾವಣೆಯಲ್ಲಿ ಧಾರಳವಾಗಿ ಖರ್ಚು ಮಾಡಿದವು. ಊಟ, ಟಿಫನ್, ಚಹಾದ ವ್ಯವಸ್ಥೆ ಮಾಡಿದ್ದರೆ ನಮ್ಮ ಸಂಘಟನೆ ಕರಪತ್ರಗಳನ್ನು ಮಾತ್ರ ಹೊರಡಿಸಿ ಪ್ರಚಾರ ಮಾಡಿತು.

ದಿನಾಂಕ 12–9–1986 ರಂದು ಚುನಾವಣೆ ಜರುಗಿದಾಗ ಎಸ್. ಎಫ್. ಐ ಅತ್ಯಧಿಕ ಬಹುಮತಗಳನ್ನು ಪಡೆದು ಜಯಗಳಿಸಿದರು. ಉಪಾಧ್ಯಕ್ಷರಾಗಿ ಕಾಂ : ಕರಿಬಸಪ್ಪ ಪ್ರಧಾನ ಕಾರ್ಯದರ್ಶಿಯಾಗಿ ಕಾಂ : ಬಸವರಾಜ ಸಜ್ಜನ್ ಮತ್ತು ಸಹ ಕಾರ್ಯದರ್ಶಿ ಕಾ . ಶರಣಪ್ಪ ಬರಸಿ ಓಟುಗಳನ್ನು ಪಡೆದರೆ ಎ.ಬಿ.ವಿ.ಪಿ ಯ ನಾಯಕ ಹಾಗೂ ಹಿಂದಿನ ವರ್ಷದ ಪ್ರಧಾನ ಕಾರ್ಯದರ್ಶಿ ವಿರೇಂದ್ರ ಪ್ರಸಾದ ಸಹಕಾರ್ಯದರ್ಶಿ ಸ್ಥಾನಕ್ಕೆ ನಿಂತು ಶೇ. 25 ಮತಗಳನ್ನು ಪಡೆದು ಸೋಲನ್ನು ಅನುಭವಿಸಿದರು.

ಎಸ್. ಎಫ್. ಐ. ಬ್ಯಾನರ ಅಡಿಯಲ್ಲಿ ನಿಂತ ವರ್ಗ ಪ್ರತಿನಿಧಿಗಳಾಗಿ ಚೌಡಯ್ಯ, ಅಯ್ಯಪ್ಪ ದುಮ್ಮಿ, ಸೋಮಶೇಖರದವಲಪಾಣಿ ಚುನಾಯಿರಾದರು.

ಅಲ್ಲದೆ 25ನೇ ಆಗಸ್ಟ್ 1986 ರಂದು ಸ್ಥಳೀಯ ಜೂನಿಯರ್ ಕಾಲೇಜಿನಲ್ಲಿ ಚುನಾವಣೆ ಜರುಗಿದಾಗ 19 ವರ್ಗಪ್ರತಿನಿಧಿಗಳಲ್ಲಿ 14 ವರ್ಗ ಪ್ರತಿನಿಧಿಗಳು ಎಸ್. ಎಫ್. ಐ. ಅಭ್ಯರ್ಥಿಗಳು ಚುನಾಯಿತರಾದರು. ಎಸ್. ಎಫ್. ಐ. ಇಲ್ಲಿಯೂ ತನ್ನ ಬಲವನ್ನು ಪ್ರದರ್ಶಿಸಿತು.

ಕ್ಯಾಬಿನೇಟ್ ಸ್ಥಾನಕ್ಕೆ 30 ನೇ ಆಗಸ್ಟ್ 1986 ರಂದು ಚುನಾವಣೆ ಜರುಗಿದಾಗ 2 ಸ್ಥಾನಗಳಾದ ಪ್ರಧಾನ ಕಾರ್ಯದರ್ಶಿಯಾಗಿ ಕಾಂ : ಶ್ರೀಕಾಂತ ಕ್ರೀಡಾ ಕಾರ್ಯದರ್ಶಿಯಾಗಿ ಕಾಂ . ಅಯ್ಯನಗೌಡ ಇವರು ಆಯ್ಕೆಯಾದರು.

ಇಲ್ಲಿಯೂ ಎ.ಬಿ.ವಿ.ಪಿ. ಸ್ಪರ್ಧಿಸಿ ಸೋಲುವ ಪ್ರಸಂಗ ಬಂದಾಗ ಬೆದರಿಕೆ, ಅಪಹರಣ, ಧಾರಾಳವಾಗಿ ಹಣವನ್ನು ಖರ್ಚು ಮಾಡಿದರು ಆದರೂ ಅಭ್ಯರ್ಥಿಗಳು ಸಂಪೂರ್ಣ ಸೋಲನ್ನು ಅನುಭವಿಸಿದರು. ಹೀಗೆ ಎಸ್.ಎಫ್.ಐ. ಸಿಂಧನೂರು ಕಾಲೇಜ್ ಚುನಾವಣೆಯಲ್ಲ ಹೊಸ ಇತಿಹಾಸವನ್ನು ಸೃಷ್ಟಿಮಾಡಿತ್ತು.

ಎಸ್. ಎಫ್. ಐ. ಸಮಿತಿ ರಚನೆ

ಸೆಪ್ಟೆಂಬರ್ 20 ರಂದು ದೇವದುರ್ಗದಲ್ಲಿ ನಡೆದ ಎಸ್. ಎಫ್. ಐ. ನ ಸಭೆಯಲ್ಲಿ ದೇವದುರ್ಗ ತಾಲೂಕು ಸಮಿತಿಯನ್ನು ರಚಿಸಲಾಗಿದೆ. ಕಾ. ಬಸವಂತರಾಯ ಅವರು ಸ್ವಾಗತಿದರು. ಎಸ್. ಎಫ್. ಐ. ನ ರಾಯಚೂರು ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾ. ಎಸ್. ರಾಮನಗೌಡರು ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಅಧ್ಯಕ್ಷರಾಗಿ ಕಾ. ತಿರುಪತಿ, ಉಪಾಧ್ಯಕ್ಷರಾಗಿ ಕಾ. ನಾಗರಾಜ, ಕಾರ್ಯದರ್ಶಿಯಾಗಿ ಕಾ. ರಾಜೇಶ್, ಸಹಕಾರ್ಯದರ್ಶಿಯಾಗಿ ಕಾ. ಮಾನಪ್ಪ ಹಾಗೂ ಖಜಾಂಚಿಯಾಗಿ ಕಾ. ಮಾನೇಶ ಅವರನ್ನು ಆಯ್ಕೆಮಾಡಲಾಯಿತು.

ನಂತರ ನೂತನ ಸಮಿತಿಯ ಸಭೆ ನಡೆದು ದೇವದುರ್ಗದ ಮತ್ತು ಜಾಲಹಳ್ಳಿಯ ಶಾಲೆಯ ಸಮಸ್ಯೆಯ ಬಗ್ಗೆ ಚರ್ಚಿಸಿ, ಸಮಸ್ಯೆಯನ್ನು ಪರಿಹರಿಸಲು ಸಂಬಂಧ ಪಟ್ಟ ಅಧಿಕಾರಿಗಳನ್ನು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯಿತು

ಕೊಲೆ ಸುಲಿಗೆಗಳಲ್ಲಿ ಕಾಂಗ್ರೆಸ್ ರಾಜ್ಯಗಳ ಮೇಲುಗೈ

(3 ನೇ ಪುಟದಿಂದ)

ಇನ್ನೂ ದಕ್ಷಿಣ ಭಾರತದ ರಾಜ್ಯಗಳಾದ.

ತಮಿಳುನಾಡು

ಮೊದಲ ಮೂರು ತಿಂಗಳಲ್ಲಿ ತಮಿಳುನಾಡಿನಲ್ಲಿ 448 ಕೊಲೆಗಳು, 24 ಸುಲಿಗೆಗಳು, 130 ಹೆದ್ದಾರಿದರೋಡೆ, 64 ಅತ್ಯಾಚಾರಗಳು ನಡೆದಿವೆ.

ಕರ್ನಾಟಕದಲ್ಲಿ

ಈ ವರ್ಷದ ಮೊದಲ ಆರು ತಿಂಗಳುಗಳಲ್ಲಿ 568 ಕೊಲೆಗಳು, 115 ಸುಲಿಗೆಗಳು, 256 ಹೆದ್ದಾರಿ ದರೋಡೆಗಳು, 596 ಅತ್ಯಾಚಾರಗಳು ನಡೆದಿವೆ.

ದೆಹಲಿ

ಈ ವರ್ಷದ ಮೊದಲರು ತಿಂಗಳುಗಳಲ್ಲಿ 131 ಕೊಲೆಗಳು, ನಡೆದಿವೆ. 11 ಸುಲಿಗೆಗಳು, 102 ಹೆದ್ದಾರಿ ದರೋಡೆಗಳು, 54 ಅತ್ಯಾಚಾರಗಳು ನಡೆದಿವೆ, ಇದರೊಟ್ಟಿಗೆ 130 ಆತ್ಮಹತ್ಯೆ ಹಾಗೂ 18 ವರದಕ್ಷಿಣೆ ಸಾವುಗಳು ನಡೆದಿವೆ.

ಗೃಹಮಂತ್ರಿ ಪಶ್ಚಿಮ ಬಂಗಾಳ ಹಾಗೂ ತ್ರಿಪುರಾ ರಾಜ್ಯಗಳ ಬಗ್ಗೆ ಆಪಾದನೆಗಳು ಇಲ್ಲದಿರುವ ರಾಜ್ಯ ಎಂದು ಗುರುತಿಸಿದ್ದಾರೆ. ಕೇಂದ್ರಾಡಳಿತಕೊಳಪಟ್ಟಿರುವ ಪ್ರದೇಶ ದೆಹಲಿಯಲ್ಲಿ ಅತಿಹೆಚ್ಚು ಆಪಾದನೆಗಳು ನಡೆದಿವೆ.

ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಸಮಿತಿಯ ಸಭೆ

ಶಾಸಕರ ಭವನ. ಕೊಠಡಿ ಸಂಖ್ಯೆ 233/301, ಬೆಂಗಳೂರು

ತಾ. 15–10–86 ಬೆಳಿಗ್ಗೆ 10–30.

ರಾಜ್ಯ ಸಮಿತಿಯ ಸದಸ್ಯರಿಗೆಲ್ಲಾ 1–10–86ರ ಸುತ್ತೋಲೆಯನ್ನು ಕಳುಹಿಸಲಾಗಿದೆ ರಾಜ್ಯ ಸಮಿತಿಯ ಸದಸ್ಯರೆಲ್ಲಾ ಸಕಾಲದಲ್ಲಿ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕು.

ಪ್ರಧಾನ ಕಾರ್ಯದರ್ಶಿ,

ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ

ವಿದ್ಯಾರ್ಥಿ ಯುವ ಜನತೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ 1981 ರಿಂದ ಪ್ರತಿ ವರ್ಷವೂ "ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ" ಚಳವಳಿ ಹೂಡಲಾಗಿದೆ. ಕರ್ನಾಟಕ ರಾಜ್ಯದಾದ್ಯಂತ ಸೆಪ್ಟೆಂಬರ್ 17 ರಂದು ವಿದ್ಯಾರ್ಥಿ ಯುವ ಜನರ ಮೆರವಣಿಗೆ ಪ್ರದರ್ಶನ ಧರಣಿ ಹೋರಾಟ ರೂಪಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ) ಕರ್ನಾಟಕ ರಾಜ್ಯ ಸಮಿತಿಗಳು ನೀಡಿದ ಕರೆಯಂತೆ ಬೆಂಗಳೂರು ಜಿಲ್ಲಾ ಸಮಿತಿಗಳ ಆಶ್ರಯದಲ್ಲಿ ಸೆಪ್ಟಂಬರ್ 17 ರಂದು ಮೈಸೂರು ಬ್ಯಾಂಕ್ ಚೌಕದಿಂದ ವಿದ್ಯಾರ್ಥಿ–ಯುವಜನರ ಮೆರವಣಿಗೆ ನಡೆಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಗೆ 10 ಪ್ರಮುಖ ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಿ ಮಾತುಕತೆ ನಡೆಸಲಾಯಿತು. ಉಪನ್ಯಾಸಕರ ನೇಮಕ ಹಾಸ್ಟೆಲ್ ಸೌಲಭ್ಯ ಹಾಗೂ ಕಾಲೇಜಿನ ಕಟ್ಟಡ ಪ್ರಾರಂಭಕ್ಕೆ ಕೂಡಲೇ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು. ಇತರೇ ಬೇಡಿಕೆಗಳ ಕುರಿತು ರಾಜ್ಯ—ಕೇಂದ್ರ ಸರ್ಕಾರದ ಗಮನಕ್ಕೆ ತರಲು ಮನವಿಯನ್ನು ರವಾನಿಸುವುದಾಗಿ ತಿಳಿಸಿದರು. ಧರಣಿಯನ್ನುದ್ದೇಶಿಸಿ ಎಸ್. ಎಫ್. ಐ. ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಎನ್. ರಾಜಣ್ಣ, ಡಿ. ವೈ. ಎಫ್. ಐ. ಜಿಲ್ಲಾ ಕಾರ್ಯದರ್ಶಿ ಕಾ. ಟಿ ಶಿವಶಂಕರ್ ರಾಜ್ಯ ಕಾರ್ಯದರ್ಶಿ ಕಾ. ಶಿವರಾಂ ಮಾತನಾಡಿದರು. ಸಭೆಯ ಕೊನೆಯಲ್ಲಿ ಕಾ. ಡಿ. ಶಿವಶಂಕರ್ ವಂದನಾರ್ಪಣೆ ನಂತರ ಸಭೆಯು ಮುಕ್ತಾಯವಾಯಿತು.

ವೆಂಕಟಸ್ವಾಮಿ ವರದಿ ಚಳುವಳಿ ನಡುವೆ ಮೂಡಿಬಂದ ಧ್ವನಿ

ಮೀಸಲಾತಿ ಪ್ರಶ್ನೆಯ ಹಿನ್ನೆಲೆಯಲ್ಲಿ ವೆಂಕಟಸ್ವಾಮಿ ವರದಿ ವಿರೋಧವಾಗಿ ದೊಡ್ಡ ರೀತಿಯಲ್ಲಿ ಚಳುವಳಿ ಬೆಳೆದು ಬಂದ ಮಂಡ್ಯದಲ್ಲಿ ಹೊಸ ಧ್ವನಿಯೊಂದು ಮೊಳಗಿ ಜನರನ್ನು ಆಶ್ಚರ್ಯಗೊಳಿಸಿತು. ರಾಜ್ಯ ಸಮಿತಿಗಳ ಐಕ್ಯ ಕರೆಯ ಮೇರೆಗೆ ಮಂಡ್ಯ ಜಿಲ್ಲೆಯ ಭಾರತೀ ನಗರದ ಎಸ್. ಎಫ್. ಐ ; ಡಿ.ವೈ.ಎಫ್.ಐ ಘಟಕಗಳು 30 ಕಿ.ಮೀ ದೀರ್ಘ ಪ್ರಯಾಣವನ್ನು ಸೈಕಲ್ ಜಾಥಾ ಮೂಲಕ ಕ್ರಮಿಸಿ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಉದ್ಯೋಗ—ಶಿಕ್ಷಣ ಸೇರಿದಂತೆ ಹಲವಾರು ಪ್ರಮುಖ ಬೇಡಿಕೆಗಳ ಬಗ್ಗೆ ಮನವಿ ಪತ್ರದಲ್ಲಿ ಒತ್ತಾಯಿಸಲಾಯಿತು.

ಬ್ರಹ್ಮಾವರದಲ್ಲಿ ಪೋಲೀಸರ ದೌರ್ಜನ್ಯ

ಹಳ್ಳಿಗಳಲ್ಲಿ ಹಬ್ಬುತ್ತಿರುವ ರೈತ ಸಂಘದಿಂದ ಭೀತಿಗೊಂಡ ಭೂಮಾಲಿಕರು, ಪಟ್ಟಭದ್ರ ಹಿತಾಸಕ್ತಿಗಳು ಪೋಲೀಸರ ಸಹಾಯದಿಂದ ರೈತ ಸಂಘದ ಪ್ರಭಾವವನ್ನು ತಡೆಗಟ್ಟುವ ಉದ್ದೇಶ ಹೊಂದಿದ್ದಾರೆ. 1-10-86 ರಂದು ಬೇಕ್ಕಾಡಿ ಗ್ರಾಮ ರೈತ ಸಂಘದ ಅಧ್ಯಕ್ಷ ಸಂಜೀವ ಆಚಾರಿಯವರನ್ನು ಹೋಟೆಲಿನಲ್ಲಿ ಚಾ ಕುಡಿಯುತ್ತಿದ್ದಾಗ ಬ್ರಹ್ಮಾವರ ಪೋಲೀಸ್ ಅಧಿಕಾರಿಗಳು ಚೆನ್ನಾಗಿ ಹೊಡೆದು, ಅದರ ಬೇನೆಯಿಂದ [illegible]ರು ನೆಲಕ್ಕೆ ಬಿದ್ದಾಗ ಅವರನ್ನು [illegible]ಟುಕಾಲಿನಿಂದ ಪ್ರೇತಿಯ ಪೇಟೆಯಲ್ಲಿ ಬಹಿರಂಗವಾಗಿ ತುಳಿದು, ಪೋಲೀಸ್ ಠಾಣೆಯಲ್ಲಿ ಅಕ್ರಮವಾಗಿ ಬ[illegible]ಟ್ಟು ಹಿಂಸೆ ನಡೆಸಿದ್ದಾನೆ. ಒ[illegible] ರಾಜಕೀಯ ಪುಢಾರಿಯ ಪ್ರಚೋದನೆಯಿಂದ ಈ ದೌರ್ಜನ್ಯ ನಡೆದಿದೆ. ಅದನ್ನು ಪ್ರತಿಭಟಿಸಲು ತಾ|| 4 ರಂದು ನಡೆದ ಬಹಿರಂಗ ಸಭೆಯಲ್ಲಿ ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಅವರು ಭಾಷಣ ಮಾಡಿ ಪೋಲಿಸರ, ದೌರ್ಜನ್ಯವನ್ನು ಖಂಡಿಸಿ, ಪೋಲೀಸ್ ಠಾಣೆ ಎದುರು 49 ರೈತರು ನಡೆಸಿರುವ ಸತ್ಯಾಗ್ರಹಕ್ಕೆ ಬೆಂಬಲ ನೀಡಿದ್ದಲ್ಲದೆ, ರೈತರ ಮೇಲೆ ಹಾಕಿದ ಸುಳ್ಳು ಕೇಸನ್ನು ಹಿಂತೆಗೆಯಬೇಕೆಂದು ಒತ್ತಾಯಪಡಿಸಿದರು. ಅಂಥ ದಬ್ಬಾಳಿಕೆಗಳ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದೂ ಕರೆ ನೀಡಿದರು.

ವಿರಾಜಪೇಟೆಯಲ್ಲಿ ಗೂಂಡಾಗಿರಿ—ಪೋಲೀಸರ ನಿಷ್ಕ್ರಿಯತೆ

ಕೇಳಲು ಸಿದ್ಧರಾಗಿದ್ದರೂ ಕೂಡ ಜನ ಜಾಗೃತಿ ಸಮಿತಿಯವರು ಕೋಮು ದ್ವೇಷ ಹರಡಲು ಕುತಂತ್ರ ನಡೆಸುವಾಗ, ಪೋಲೀಸ್ ಸೂಪರಿಂಟೆಂಡೆಂಟರು ಘಟನೆಯ ಸ್ಥಳಕ್ಕೆ ಬಂದರೂ ಕೂಡ ಗಲಭೆ ಪ್ರಚೋದಕರ ಮೇಲೆ ಕ್ರಮ ಕೈಗೊಳ್ಳದೆ, ಅವರ ಹೇಳಿಕೆಯಂತೆ ನಿರಪರಾಧಿಗಳನ್ನು ಥಳಿಸಿ, ಸುಳ್ಳು ಮೊಕದ್ದಮೆ ಹೇರಿ, ಅವರನ್ನು ಬಂಧಿಸಿದರು. ಬೆಟ್ಟದಪುರಕ್ಕೆ ಹೋಗಿದ್ದ ಸಿ.ಪಿ.ಐ. (ಎಂ) ಪಕ್ಷದ ಸದಸ್ಯರಾದ ವಿ. ಎ. ಹಂಸ ಅವರನ್ನು ಅಲ್ಪಮತಸ್ಥ ಎಂಬ ಕಾರಣದಿಂದ ಸುಳ್ಳು ಮೊಕದ್ದಮೆ ಹೂಡಲಾಯಿತು. ಈ ಅನ್ಯಾಯವನ್ನು ಪ್ರತಿಭಟಿಸಿ ಅಲ್ಪ ಮತಸ್ತ ವ್ಯಾಪಾರಸ್ಥರು ಹರತಾಳ ಆಚರಿಸಿದರು.

ಆಗಸ್ಟ್ 21 ರಂದು ಸಂತೆಯ ದಿನ ಗೋಣಿಕೊಪ್ಪ, ಬಾಳಲೆ, ಮೂರ್ನಾಡು, ಪೊನ್ನಂಪೇಟೆ, ನಾಪೋಕ್ಲು, ಮೊದಲಾದ ಕಡೆಗಳಿಂದ ಬಂದ ಯುವಕರು ಮಾರುಕಟ್ಟೆಯಲ್ಲಿ ಅಲ್ಪಮತಸ್ತರ ಅಂಗಡಿಗಳ ಮುಂದೆಯೂ ನಿಂತು ಗಿರಾಕಿಗಳು ಬಾರದಂತೆ ಬಲಾತ್ಕಾರ ಮಾಡಿದರು. ಅಲೂಗಡ್ಡೆಯನ್ನು ಚಲ್ಲಾಪಿಲ್ಲಿ ಮಾಡಿದರು. ತೆಂಗಿನಕಾಯಿಗಳನ್ನು ಒಡೆದು ಹಾಕಿದ್ದರು. ಪ್ರತಿಬಂಧಕಾಜ್ಞೆ ಜಾರಿಯಲ್ಲಿದ್ದರೂ ಕೂಡ ಈ ರೀತಿ ಪುಂಡ ಜನರು ಪುಂಡಾಟಿಕೆ ನಡೆಸುವಾಗ, ಕೋಮು ಭಾವನೆ ಕೆರಳಿಸಿದಾಗ ಪೋಲೀಸರು ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ, ಅಲ್ಪಮತಸ್ಥರ ಮೇಲೆ ನಿರ್ಭಯದಿಂದ ದಬ್ಬಾಳಿಕೆ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟರು.

ಈ ರೀತಿ ದಾಂಧಲೆ ಮಾಡಿದವರಲ್ಲಿ ಹೆಚ್ಚಿನವರೆಲ್ಲ ಈ ಹಿಂದೆ ಹಲವಾರು ಕುಕೃತ್ಯಗಳನ್ನೆಸಗಿ, ಅಪಾದನೆಗೊಳಗಾಗಿ, ಜೈಲು ಅನುಭವಿಸಿ, ರೌಡಿ ಪಟ್ಟಿಯಲ್ಲಿರುವ[illegible] ಅವರ ಪೋಟೋಗಳೆಲ್ಲ ಪೋಲೀಸ್ ಸ್ಟೇಷನ್ನಿನಲ್ಲಿ ರಾರಾಜಿಸುತ್ತಿದ್ದವು. ಈಗಲೂ ಅವು ರಾರಾಜಿಸುತ್ತವೆ.

ಬಸ್ ನಿಲ್ದಾಣದಲ್ಲಿ ಕೂಲಿ ಕೆಲಸ ಮಾಡುವ ಅಲ್ಪ ಜಾತಿಯವರ ಮೇಲೆ ದಬ್ಬಾಳಿಕೆ ನಡೆಸಲಾಯಿತು. ಸಿ. ಪಿ. ಐ (ಎಂ) ಕಾರ್ಯಕರ್ತರು ಮಧ್ಯ ಪ್ರವೇಶಿಸಿ ಕೂಲಿಗಾರರ ಸಭೆ ಕರೆದು ಅವರಲ್ಲಿ ಧೈರ್ಯ ತುಂಬಿ, ಮತ್ತೆ ಅವರೆಲ್ಲ ಕೂಲಿ ಕೆಲಸಮಾಡಲು ಅವಕಾಶ ಮಾಡಿಕೊಟ್ಟಿತು. ಈ ಪುಂಡ ಜನ ಸಿ ಪಿ.ಐ (ಎಂ) ಪಕ್ಷದವರನ್ನೂ ಮನಬಂದಂತೆ ಬಯ್ಯುತ್ತಿದ್ದರು

ಹೋದ ತಿಂಗಳು ವಿರಾಜಪೇಟೆಯಲ್ಲಿ ಪುರಸಭೆಯು ಎರಡು ಮಳಿಗೆಗಳನ್ನು ಹರಾಜು ಮಾಡುವಾಗಲೂ ಈ ಹಿಂದೆ ಗಲಭೆ ನಡೆಸಿದ್ದ ವ್ಯಕ್ತಿಗಳೇ ಉನ್ಮತ್ತರಂತೆ ವರ್ತಿಸಿ ಅಲ್ಪ ಮತಸ್ಥರು ಲೀಲಾವಿನಲ್ಲಿ ಪಾಲ್ಗೊಳ್ಳುವಂತೆ ತಡೆ ಹಾಕಿದ್ದರು.

ಈ ರೀತಿ ಅಲ್ಪ ಮತಸ್ಥರ ಮೇಲೆ ನಾನಾ ರೀತಿಯ ದೌರ್ಜನ್ಯ, ಬೆದರಿಕೆ ನಡೆದರೆ ಕೂಡ ಪೋಲೀಸರು ನಿಷ್ಪಕ್ಷ ರೀತಿಯಿಂದ ವರ್ತಿಸಲಿಲ್ಲ. ಕಾಂಗ್ರೆ-ಜನತಾದವರೂ ಕೂಡ ದೌರ್ಜನ್ಯ ನಡೆಸುವವರಿಗೇನೇ ಬೆಂಬಲ ನೀಡುತ್ತಿದ್ದರು.

ಈ ರೀತಿ ಒಂದೇ ಸಮನೆ ಅಲ್ಪ ಭಾಷಿಕರ ಮೇಲೆ ದಬ್ಬಾಳಿಕೆ ನಡೆಯುತ್ತಿದ್ದಾಗ, ಸಮಾಜ ದ್ರೋಹಿಗಳ ಮೇಲೆ ಕ್ರಮ ಕೈಗೊಂಡ ಪೋಲೀಸ್ ಅಧಿಕಾರ ಬಾವಾ ಎಂಬವರನ್ನೇ ವಿರಾಜಪೇಟೆಯಿಂದ ಬದ್ಲಿ ಮಾಡಲಾಯಿತು. ಈ ರೀತಿ ಬಡಕೂಲಿಗಾರರ ಅಲ್ಪ ಮತಸ್ತರ ಮೇಲೆ ದಬ್ಬಾಳಿಕೆ ನಡೆಯುತ್ತಿದ್ದರೆ ರಾಜ್ಯ ಸರಕಾರ ಯಾವದೇ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದು ಅತ್ಯಂತ ಖಂಡನೀಯ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ಶಾಸಕರೂ, ಹಾಗೆಯೇ ಸಿ.ಪಿ.ಐ. (ಎಂ) ಪಕ್ಷದ ಘಟಕಗಳು ಹೆಗಡೆ ಸರಕಾರಕ್ಕೆ, ಜನ ಜಾಗೃತಿ ಸಮಿತಿಯವರ, ಕೇಡಿಗಳ ದಬ್ಬಾಳಿಕೆಯನ್ನು ತಡೆಹಿಡಿಯಬೇಕೆಂದೂ, ಬಡವರಿಗೆ ರಕ್ಷಣೆ ನೀಡಬೇಕೆಂದೂ ಮನವಿಗಳನ್ನು ಸಲ್ಲಿಸಿದರು. ಆದರೆ ಸರಕಾರ ಏನೂ ಕ್ರಮತೆಗೆದುಕೊಂಡಿಲ್ಲ.

ಜಿಲ್ಲೆಯ ಸಣ್ಣ ಪತ್ರಿಕೆಗಳು ನಿಜವಾದ ವಸ್ತುನಿಷ್ಟ ಸುದ್ದಿಗಳನ್ನು ಪ್ರಕಟಿಸುತ್ತಿಲ್ಲ. ಅವುಗಳಿಗೂ ಬೆದರಿಕೆ ಹಾಕಲಾಗುತ್ತಿದೆ. ಪೋಲೀಸ್ ಇಲಾಖೆಯು ಕೈಕುಂತದಲ್ಲಿರುವವರೆಲ್ಲ, ಪಕ್ಷಪಾತ ನೀತಿಯನ್ನನುಸರಿಸುತ್ತಿದ್ದಾರೆ. ಇದು ನಾಚಿಕೆಗೇಡು.

ಉಭಯ ಕೋಮುಗಳ ಜನಸಾಮಾನ್ಯರಲ್ಲಿ ಇವತ್ತಿಗೂ ಪರಸ್ಪರ ಪ್ರೀತಿ ವಿಶ್ವಾಸವಿದೆ. ಆದರೆ ಮತಾಂಧರು ಹೆದರಿಕೆ-ಬೆದರಿಕೆಗಳ ಮೂಲಕ ಅಲ್ಪಮತದವರನ್ನು ಹೇಗಾದರೂ ಮಾಡಿ ಓಡಿಸಬೇಕೆಂಬ ಹೊಂಚುಹಾಕಿದ್ದಾರೆ. ಜಾತೀಯ ಸೌಹಾರ್ದತೆ ಕಾಪಾಡಲು ದುಡಿಯುತ್ತಿರುವ ಸಿ. ಪಿ. ಐ. (ಎಂ) ಪಕ್ಷದ ಕಾರ್ಯಕರ್ತರಿಗೆ ಬೆದರಿಕೆ ಹಾಕಲಾಗುತ್ತಿದೆ. ಅವರ ಜೀವನಕ್ಕೂ ಅಪಾಯವಿದೆ.

ಆದ್ದರಿಂದ ಜನತಾ ಸರಕಾರ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಪುಂಡ ಜನರನ್ನು ಹತೋಟಿಯಲ್ಲಿಟ್ಟು ಜಾತೀಯ ಪ್ರಚೋದನೆಗೆ ಅವಕಾಶ ಮಾಡಿಕೊಡದಂತೆ ಯೋಗ್ಯ ಕ್ರಮ ಕೈಗೊಳ್ಳುವಂತೆ ಪೋಲೀಸರಿಗೆ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇವೆ.

ಎಂಥ ಗಂಭೀರ ಪರಿಸ್ಥಿತಿ ಇದ್ದರೂ ಕೂಡ ಜಾತೀಯ ಸೌಹಾರ್ದತೆಯನ್ನು ಕಾಪಾಡಲು, ಬಡವರನ್ನು ರಕ್ಷಿಸಲು ಸಿ. ಪಿ ಐ. (ಎಂ) ಕಾರ್ಯಕರ್ತರೂ, ಸಹಾನುಭೂತಿದಾರರೂ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ಜೀವನದ ಹಂಗು ಬಿಟ್ಟು ದುಡಿಯಬೇಕೆಂದು ಕೇಳಿಕೊಳ್ಳುತ್ತೇವೆ.

ಅರಣ್ಯಾಧಿಕಾರಿಗಳ ದೌರ್ಜನ್ಯ

ಉಗ್ರ ಪ್ರತಿಭಟನೆ, ಮೆರವಣಿಗೆ

ತಮ್ಮ ಜೀವನೋಪಾಯಕ್ಕಾಗಿ ಕಾಡಿನಲ್ಲಿ ಸಣ್ಣ ಪುಟ್ಟ ಒಣ ಕಟ್ಟಿಗೆಗಳನ್ನು ಆಯ್ದು ಪೇಟೆಗಳಲ್ಲಿ ಮಾರಾಟ ಮಾಡುತ್ತಿದ್ದ ಬಡಜನರ ಮೇಲೆ ಹೊಸಪೇಟೆ ರೇಂಜಿನ ಅರಣ್ಯಾಧಿಕಾರಿಗಳು ಅಮಾನುಷವಾದ ದೌರ್ಜನ್ಯವನ್ನು ನಡೆಸಿದ್ದಾರೆ ಈ ಬಡಜನರು ಹೊಸಪೇಟೆ ತಾಲ್ಲೂಕಿನ ಗಾದಿಗನೂರು, ಧರ್ಮಸಾಗರ, ಕಾಕುಬಾಳ್, ಪಾಪಿನಾಯ್ಕನಹಳ್ಳಿ ಗ್ರಾಮದ ನಿವಾಸಿಗಳಾಗಿದ್ದು ಈ ಪ್ರದೇಶಗಳು [illegible] ಬರಗಾಲಕ್ಕೆ ತುತ್ತಾಗಿದೆಯಲ್ಲದೇ, ದುಡಿಯಲು ಭೂಮಿಯಿಲ್ಲದೆ, ಮಾಡಲು ಕೆಲಸವಿಲ್ಲದೇ ಅನಿವಾರ್ಯವಾಗಿ ಒಣಕಟ್ಟಿಗೆ [illegible] ಕೆಲಸದ ಒತ್ತಾಯಕ್ಕೊಳಗಾದವರಾಗಿದ್ದಾರೆ.

28-8-86 ರಂದು ಅರಣ್ಯಾಧಿಕಾರಿಗಳು ಹಠಾತಾನೇ ಬಡಜನರ ಮೇಲೆ ಬಂದೆರಗಿ, ತೀವ್ರ ಆಕ್ರಮಣ ನಡೆಸಿದ್ದಾರೆ. ಮುದುಕರು, ಮಕ್ಕಳು ಹೆಂಗಸರನ್ನದೇ ದೊಣ್ಣೆಯಿಂದ ಭೀಕರವಾಗಿ ಥಳಿಸಿದ್ದಾರೆ. ತಲೆ ಒಡೆದು ರಕ್ತ ಸೋರಿದಾಗ ತೊಳೆದುಕೊಳ್ಳಲು ಸೋಪನ್ನು ಕೊಟ್ಟು ಬೆದರಿಸಿ ಹೊರಗಟ್ಟಿದ್ದಾರೆ. ಎರಡು ಚಿಕ್ಕ ಮಕ್ಕಳ ತಾಯಿಯಾಗಿರುವ ಶ್ರೀಮತಿ ಕುಪ್ಪಮ್ಮ ಎನ್ನುವ 25 ವರ್ಷಗಳ ಹೆಣ್ಣು ಮಗಳ ಮೇಲೆ ಕೈಮಾಡಿದ್ದಲ್ಲದೇ ಕಾಲು ಚಾಚಿಸಿ ಆಕೆಯ ತೊಡೆಗಳ ಮೇಲೆ ಬೂಟು ಕಾಲುಗಳಿಂದ ನಿಂತು ದೊಣ್ಣೆಯಿಂದ ಅಂಗಾಲುಗಳಿಗೆ ಮನಬಂದಂತೆ ಕ್ರೂರವಾಗಿ ಹೊಡೆದಿದ್ದಾರೆ. ವಯೋವೃದ್ಧ ತಂದೆಯನ್ನು ಥಳಿಸಿದ್ದಾರೆ. ಎಳೆಯ ಮಗು ಅಂಗಾಲುಗಳಿಗೆ ಮೈಗೆ, ಕೈಗಳಿಗೆ ಹಸಿ ಸೇರುವ ಹಾಗೆ, ರಕ್ತ ಸೋರುವಂತೆ ಹೊಡೆದಿದ್ದಾರೆ. ಲಕ್ಷ್ಮಿ ಎನ್ನುವ ಹೆಣ್ಣು ಮಗಳನ್ನು ಹೊಡೆದು ಬಿಟ್ಟು ಹೋಗಿದ್ದಾರೆ. ಇಷ್ಟು ಸಾಲದೆಂಬಂತೆ ಅರಣ್ಯಾಧಿಕಾರಿಗಳ ಕಛೇರಿಯಲ್ಲೂ, ಕಾರಿನಲ್ಲಿ ಹಾಕಿಕೊಂಡು ಹೋಗಿ ಥಳಿಸಿದ್ದಾರೆ. ಅವಾಚ್ಯಕ ಶಬ್ದಗಳಿಂದ ಬೈದಿದ್ದರಂತೆ.

ಈ ಪ್ರಕರಣದಲ್ಲಿ ಸಿನಿಮಾ ನೋಡಿ ಊರಿಗೆ ವಾಪಾಸಾಗುತಿದ್ದ ಮ್ಯಾಂಗನೀಸ್ ಲೋಡರ್ಸ್‌ಗಳಾದ ಅಮಾಯಕ ಇಬ್ಬರು ಯುವಕರನ್ನು ಬಂಧಿಸಿ ಶಿಕ್ಷಿಸಿದ್ದಾರೆ.

ಅರಣ್ಯಾಧಿಕಾರಿಗಳ ದೌರ್ಜನ್ಯ ಇಷ್ಟಕ್ಕೆ ನಿಲ್ಲಲಿಲ್ಲ. ಈ ಆರು ಬಡಜನರ ಮೇಲೆ ಶ್ರೀಗಂಧದ ಕಟ್ಟಿಗೆಯ ಕಳ್ಳಸಾಗಾಣಿಕೆಯ ಕೇಸನ್ನೂ ಹಾಕಿದ್ದಾರೆ. ಈ ಅಮಾಯಕ ಜನರನ್ನು ಜೈಲಿಗಟ್ಟಿದ್ದಾರೆ ಕೊಳೆಸುತ್ತಿದ್ದಾರೆ.

ಅರಣ್ಯಾಧಿಕಾರಿಗಳ ಅಮಾನವೀಯ ಹೀನ ದೌರ್ಜನ್ಯವನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಗಾದಿಗನೂರು, ಪಾಪಿನಾಯ್ಕನಹಳ್ಳಿ, ಕಾರ್‌ಬಾಳ್, ಬೂವನಹಳ್ಳಿ, ಧರ್ಮಸಾಗರದ ಗ್ರಾಮಗಳಿಂದ ಸುಮಾರು 600 ರೂ ಅಧಿಕ ಜನರು, ವಿಶೇಷವಾಗಿ 250 ಕ್ಕೂ ಅಧಿಕ ಮಹಿಳೆಯರು-ಮಕ್ಕಳೊಂದಿಗೆ ಹೊಸಪೇಟೆಯಲ್ಲಿ 5-9-86 ರಂದು ಬೃಹತ್ ಮೆರವಣಿಗೆ ನಡೆಸಿದರು.

ಬಂಧಿತರನ್ನು ಈ ಕೂಡಲೇ ಹೊರಗೆ ಬಿಡಬೇಕು. ಸುಳ್ಳು ಮೊಕದ್ದಮೆಗಳನ್ನು ವಾಪಾಸು ತೆಗೆದುಕೊಳ್ಳಬೇಕು. ದೌರ್ಜನ್ಯಕೋರ ಅರಣ್ಯಾಧಿಕಾರಿಗಳನ್ನು ಕೂಡಲೇ ವಜಾ ಮಾಡಬೇಕೆಂದು ಬೇಡಿಕೊಂಡ ಮನವಿಯನ್ನು ಅಸಿಸ್ಟೆಂಟ್ ಕಮಿಷನರ್ ಅವರಿಗೆ ಸಲ್ಲಿಸಲಾಯಿತು. ಕಛೇರಿಯ ಆವರಣದಲ್ಲಿ ನಡೆದ ಸಭೆಯನ್ನುದ್ದೇಶಿಸಿ ರೈತ ಮುಖಂಡರಾದ ಪಿ. ಆರ್. ವೆಂಕಟೇಶ್, ಅವರು ದೌರ್ಜನ್ಯವನ್ನು ಖಂಡಿಸಿದರಲ್ಲದೇ, ಈ ಕೂಡಲೇ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಒತ್ತಾಯಿಸಿದರು. ತಕ್ಷಣ ಕ್ರಮ ಜರುಗದಿದ್ದಲ್ಲಿ ಜಿಲ್ಲೆಯಾದ್ಯಂತ ಹೋರಾಟ ನಡೆಸುವವೆಂದು ಉತ್ತರಿಸಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone: 75331 Editor P. Ramachandra Rao Managing Editor: N. K. Upadhyaya